ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಫೆಬ್ರವರಿ 29, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 288 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999






## ವೀರೇಶ ದೊರೆಯೇ ನಿನಗಾರು ಸರಿಯೇ?

ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸವವು ಬುಧವಾರ ಸಂಜೆ ಅಪಾರ ಜನ ಸಾಗರದ ನಡುವೆ ವಿಜೃಂಭಣೆಯಿಂದ ನೆರವೇರಿತು.

# ನೀರಿನ ಸಮಸ್ಯೆಗೆ ಪಾಲಿಕೆ ಸದಸ್ಯರ ಆತಂಕ

ದಾವಣಗೆರೆ, ಫೆ.28- ಬೇಸಿಗೆಯ ಆರಂಭಿಕ ದಿನಗಳಲ್ಲಿ ನಗರದಲ್ಲಿ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ ಪಾಲಿಕೆ ಸದಸ್ಯರು ಪಕ್ಷ ಭೇದ ಮರೆತು ದನಿ ಎತ್ತಿದರು.

ಬುಧವಾರ ಪಾಲಿಕೆಯ ಸಭಾಂಗಣದಲ್ಲಿ ಮೇಯರ್ ಬಿ.ಹೆಚ್. ವಿನಾಯಕ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ನೀರಿನ ಸಮಸ್ಯೆ, ಆಡಳಿತದಲ್ಲಿ ಅವ್ಯವಹಾರ, ಅಧಿಕಾರಿಗಳ ನಿರ್ಲಕ್ಷ್ಯ ಮತ್ತಿತರೆ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ನಗರದಲ್ಲಿನ ನೀರಿನ ಸಮಸ್ಯೆ ಚರ್ಚೆಗೆ ಮಾಜಿ ಮೇಯರ್ ಎಸ್.ಟಿ. ವೀರೇಶ್ ಮುನ್ನುಡಿ ಹಾಕುತ್ತಿದ್ದಂತೆ, ಆಡಳಿತ ಹಾಗೂ ಪ್ರತಿ ಪಕ್ಷದ ಸದಸ್ಯರೂ ದನಿಗೂಡಿಸಿದರು. ಸದಸ್ಯರಿಗೆ ಅಗೌರವ ತೋರುವ ಅಧಿಕಾರಿ, ಸಿಬ್ಬಂದಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿದರು.

ಬೇಸಿಗೆಯ ಆರಂಭಿಕ ದಿನಗಳಲ್ಲಿ ನೀರಿನ ಹಾಹಾಕಾರ ಆರಂಭವಾಗಿದೆ. ವಾರ್ಡ್ ಜನತೆಗೆ ಟ್ಯಾಂಕರ್ ಮೂಲಕ ನೀರು ನೀಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಪಾಲಿಕೆಯಿಂದ ಒಂದು ಟ್ಯಾಂಕರ್



ನೀರು ತರಿಸಬೇಕಾದರೆ 50 ಕ್ಕೂ ಹೆಚ್ಚು ಜನರಿಗೆ ಫೋನ್ ಮಾಡಬೇಕು. ನನ್ನ ವಾರ್ಡ್‌ಗೆ ಬೆಳಿಗ್ಗೆ 7.30ಕ್ಕೆ ಟ್ಯಾಂಕರ್ ತರಲು ಪ್ರಯತ್ನಿಸಿದೆ. ಸಂಜೆ 5.30ಕ್ಕೆ ಟ್ಯಾಂಕರ್ ತರಿಸುವಲ್ಲಿ ಹೈರಾಣಾಗಿದ್ದೆ ಎಂದಾಗ, ಸದಸ್ಯರಾದ ಶಿವಾನಂದ್, ಮೀನಾಕ್ಷಿ ಜಗದೀಶ್ ದನಿಗೂಡಿಸಿದರು.

ನಗರದಲ್ಲಿ ಸದ್ಯ ಎಷ್ಟು ನೀರು ಲಭ್ಯವಿದೆ. ಅದು ಎಷ್ಟು ದಿನಗಳಿಗಾಗುತ್ತದೆ ಎಂಬ ಮಾಹಿತಿ ಪಡೆದು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತದ ಸಹಾಯದಿಂದ ಭದ್ರಾ ನಾಲಾ ನೀರಿನಿಂದ ಕೆರೆ ಭರ್ತಿ ಮಾಡಿಕೊಳ್ಳಬಹುದೇ? ಎಂಬ ಬಗ್ಗೆ ಪರಿಶೀಲಿಸಬೇಕು ಎಂದು ವೀರೇಶ್ ಸಲಹೆ ನೀಡಿದರು.

ಮುಂದುವರಿದ ಅವರು, ನೀರಿನ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳದೆ, ನೀರಿನ ಅಭಾವ ಉಂಟಾದಲ್ಲಿ ಜನರ ಜೊತೆಯೇ ಪಾಲಿಗೆ ಬಂದು ಮೇಯರ್ ಹಾಗೂ ಆಯುಕ್ತರ ಕಚೇರಿಗೆ ಬೀಗ ಹಾಕಿ ಪ್ರತಿಭಟಿಸಲಾಗುವುದು ಎಂದೂ ಎಚ್ಚರಿಸಿದರು.

ಸದಸ್ಯರು ಟ್ಯಾಂಕರ್ ನೀರು ಕೇಳಿದರೆ ಅಲ್ಲಿನ ಕೆಲಸಗಾರರು ಇಂಜಿನಿಯರ್ ಹೇಳಿದರೆ ಮಾತ್ರ ಕೊಡುತ್ತೇವೆ ಎನ್ನುತ್ತಾರೆ. ಸದಸ್ಯರಿಗೆ ಕೆಲಸಗಾರರೂ (4ನೇ ಪುಟಕ್ಕೆ)

## ಟ್ಯಾಂಕರ್‌ಗಳ ಖರೀದಿಗೆ ಕ್ರಮ

**1.20 ಕೋಟಿ ರೂ.ಗೆ ಪ್ರಸ್ತಾವನೆ: ರೇಣುಕಾ**

ದಾವಣಗೆರೆ, ಫೆ. 28 - ನಗರದಲ್ಲಿನ ನೀರಿನ ಸಮಸ್ಯೆ ಮನಗಂಡು ಪಾಲಿಕೆಯಿಂದ ಟ್ಯಾಂಕರ್‌ಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆ ಆಯುಕ್ತರಾದ ರೇಣುಕಾ ಹೇಳಿದರು.

ಪಾಲಿಕೆಯಲ್ಲಿ ಪ್ರಸ್ತುತ 2 ಟ್ಯಾಂಕರ್‌ಗಳಿವೆ. ಮತ್ತೆರಡು ಟ್ಯಾಂಕರ್ ಖರೀದಿಗೆ ಕ್ರಮ ವಹಿಸೋಣ ಎಂದು ಆಯುಕ್ತರು ಹೇಳಿದಾಗ, ಬೇಸಿಗೆ ಆರಂಭವಾಗುತ್ತಿದ್ದು, ಹೆಚ್ಚಿನ ಟ್ಯಾಂಕರ್‌ಗಳ ಅಗತ್ಯ ಬೀಳುತ್ತದೆ. ಈ ಹಿನ್ನೆಲೆಯಲ್ಲಿ 10-20 ಟ್ಯಾಂಕರ್ ಖರೀದಿಸುವಂತೆ ಎ. ನಾಗರಾಜ್ ಸಲಹೆ ನೀಡಿದರು. ಸದಸ್ಯ ಚಮನ್ ಸಾಬ್ ಸ್ಟೈನ್ (4ನೇ ಪುಟಕ್ಕೆ)

# ದಾವಣಗೆರೆ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಬಿ.ಸಿ. ಉಮಾಪತಿ

## ಉಪಾಧ್ಯಕ್ಷರಾಗಿ ಟಿ.ಎಸ್. ಜಯರುದ್ರೇಶ್ ಆಯ್ಕೆ




ದಾವಣಗೆರೆ, ಫೆ. 28- ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ಉಪಾಧ್ಯಕ್ಷರಾಗಿ ವರ್ತಕ ಟಿ.ಎಸ್. ಜಯರುದ್ರೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘಗಳ ಶಿವಮೊಗ್ಗ ಉಪ ವಿಭಾಗದ ಸಹಾಯಕ ನಿಬಂಧಕರೂ ಆಗಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಚುನಾವಣಾಧಿಕಾರಿ ಎನ್.ಜಿ. ರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ಇಂದು ಸಂಜೆ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು.

ಬ್ಯಾಂಕಿನ ಆಡಳಿತ ಮಂಡಳಿಗೆ ಕಳೆದ 15 ದಿನಗಳ ಹಿಂದೆ ನಡೆದಿದ್ದ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಎಲ್ಲಾ 15 ಜನ ನಿರ್ದೇಶಕರ ಆಡಳಿತ ಮಂಡಳಿಯ ಪ್ರಥಮ ಸಭೆಯು ಇಂದು ಏರ್ಪಾಡಾಗಿದ್ದ ಸಂದರ್ಭದಲ್ಲಿ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಬಿ.ಸಿ. ಉಮಾಪತಿ ಅವರ ಹೆಸರನ್ನು ಬ್ಯಾಂಕಿನ ನಿಕಟಪೂರ್ವ ಅಧ್ಯಕ್ಷರೂ, ಹಿರಿಯ ನಿರ್ದೇಶಕರೂ ಆಗಿರುವ ಕೋಗುಂಡಿ ಬಕ್ಕೇಶಪ್ಪ ಸೂಚಿಸಿದರೆ, ಹಿರಿಯ ನಿರ್ದೇಶಕ ಎಂ. ಚಂದ್ರಶೇಖರ್ ಅನುಮೋದಿಸಿದರು.

ಉಪಾಧ್ಯಕ್ಷ ಸ್ಥಾನಕ್ಕೆ ಟಿ.ಎಸ್. ಜಯರುದ್ರೇಶ್ ಅವರ ಹೆಸರನ್ನು ಹಿರಿಯ ನಿರ್ದೇಶಕ ಕಂಚಿಕೇರಿ ಮಹೇಶ್ ಸೂಚಿಸಿದರೆ, ಹಿರಿಯ ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯಕುಮಾರ್ ಅನುಮೋದಿಸಿದರು.

ಬ್ಯಾಂಕಿನ ನಿರ್ದೇಶಕರುಗಳಾದ ದೇವರಮನೆ ಶಿವಕುಮಾರ್, ಅಂದನೂರು ಮುಪ್ಪಣ್ಣ, ಪಲ್ಲಾಗಟ್ಟಿ ಶಿವಾನಂದಪ್ಪ, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಶ್ರೀಮತಿ ಅರ್ಚನ ಡಾ. ರುದ್ರಮುನಿ, ವಿ. ವಿಕ್ರಮ್, ಹೆಚ್.ಎಂ. ರುದ್ರಮುನಿಸ್ವಾಮಿ, ಸೋಗಿ ಮುರುಗೇಶ್, ಇ.ಎಂ. ಮಂಜುನಾಥ ಅವರುಗಳು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

**ಅಭಿನಂದನೆ :** ಚುನಾವಣೆ ನಂತರ ನಡೆದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅನೇಕ ಗಣ್ಯರು, ನೂತನ ಅಧ್ಯಕ್ಷ - ಉಪಾಧ್ಯಕ್ಷರು, ಎಲ್ಲಾ ನಿರ್ದೇಶಕರುಗಳಿಗೆ ಪುಷ್ಪಮಾಲೆ ಅರ್ಪಿಸಿ ಅಭಿನಂದಿಸುವುದರ ಮೂಲಕ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ತಮ್ಮ ಆಯ್ಕೆಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ನೂತನ ಅಧ್ಯಕ್ಷ ಬಿ.ಸಿ. ಉಮಾಪತಿ, ಅಭಿವೃದ್ಧಿಯಲ್ಲಿ (4ನೇ ಪುಟಕ್ಕೆ)

# 2029ರಲ್ಲಿ ಏಕಕಾಲಕ್ಕೆ ಚುನಾವಣೆ

**ಕಾನೂನು ಆಯೋಗದ ಶಿಫಾರಸ್ಸು**

ನವದೆಹಲಿ, ಫೆ. 28 - ಲೋಕಸಭೆ, ರಾಜ್ಯ ವಿಧಾನಸಭೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ 2029ರ ನಂತರ ಏಕಕಾಲಕ್ಕೆ ಚುನಾವಣೆ ನಡೆ ಸಲು ಕಾನೂನು ಆಯೋಗ ಶಿಫಾರಸ್ಸು ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸಂವಿಧಾನಕ್ಕೆ ಹೊಸ ಅಧ್ಯಾಯ ಇಲ್ಲವೇ ಹೊಸ ಭಾಗ ಸೇರ್ಪಡೆ ಮಾಡುವ ಮೂಲಕ ಏಕಕಾಲಕ್ಕೆ ಚುನಾವಣೆ ನಡೆಸಬೇಕು ಎಂದು ನಿವೃತ್ತ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ನೇತೃತ್ವದ ಆಯೋಗವು ಶಿಫಾರಸ್ಸು ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ಮೂರು ವರ್ಷಗಳಲ್ಲಿ ವಿಧಾನಸಭೆಯ ಅವಧಿಗಳನ್ನು ಮೂರು ಹಂತದಲ್ಲಿ ಒಂದೇ ಸ್ವರೂಪಕ್ಕೆ ತರಬೇಕು. 2029ರ ಮೇ - ಜೂನ್ ತಿಂಗಳಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸಬೇಕು ಎಂದು ಶಿಫಾರಸ್ಸು ಮಾಡಲಾಗುವುದು.

ಮೂರೂ ಹಂತದ ಚುನಾವಣೆಗಳಿಗಾಗಿ ಒಂದೇ ಮತದಾರರ ಪಟ್ಟಿ ಇರಬೇಕು. ಏಕಕಾಲಕ್ಕೆ ಚುನಾವಣೆ ನಡೆಸಬೇಕು. ಈ ಬಗ್ಗೆ ಸಂವಿಧಾನದಲ್ಲಿ ಹೊಸ ಅಧ್ಯಾಯ ಸೇರ್ಪಡೆ ಮಾಡಬೇಕು ಎಂದು ಶಿಫಾರಸ್ಸು ಮಾಡಲಾಗುವುದು.

ಹೊಸ ಅಧ್ಯಾಯದ ಮೂಲಕ, ಸಂವಿಧಾನದಲ್ಲಿ ಈಗಾಗಲೇ ಇರುವ ಅಂಶಗಳನ್ನು ಬದಲಿಸಬೇಕು. 3 ಹಂತದಲ್ಲಿ ವಿಧಾನಸಭೆಗಳ ಅವಧಿಯನ್ನು ಬದಲಿಸಬೇಕು. ಮೊದಲ ಹಂತದಲ್ಲಿ ಮೂರರಿಂದ 6 ತಿಂಗಳ ಅವಧಿ ಇರುವ ವಿಧಾನಸಭೆಗಳ ಅವಧಿ ಮೊಟಕುಗೊಳಿಸಬೇಕು.

ಒಂದು ವೇಳೆ ಅವಿಶ್ವಾಸ ನಿಲುವಳಿ ಕಾರಣದಿಂದಾಗಿ ಸರ್ಕಾರ ಪತನಗೊಂಡರೆ ಇಲ್ಲವೇ ಅತಂತ್ರ ವಿಧಾನಸಭೆ ಸೃಷ್ಟಿಯಾದರೆ, ಒಮ್ಮತದ ಸರ್ಕಾರ ರಚಿಸಬೇಕು. ಇದರಲ್ಲಿ ಹಲವಾರು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಇರಬೇಕು ಎಂದು ಆಯೋಗ ಶಿಫಾರಸ್ಸು ಮಾಡಲಿದೆ.

ಏಕೀಕೃತ ಸರ್ಕಾರ (4ನೇ ಪುಟಕ್ಕೆ)

# ಮಣಿಪುರ : ಪೊಲೀಸ್ ಅಧಿಕಾರಿ ಅಪಹರಣ, ಕಮಾಂಡೋ ಶಸ್ತ್ರತ್ಯಾಗ

ಇಂಫಾಲ್, ಫೆ. 28 - ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ಮೊರಾಂಗ್ತೆಮ್ ಅವರನ್ನು ಅಪಹರಿಸಿದ್ದನ್ನು ಪ್ರತಿಭಟಿಸಿ ಮಣಿಪುರ ಪೊಲೀಸ್ ಕಮಾಂಡೋಗಳು ಶಸ್ತ್ರಗಳನ್ನು ಕೆಳಗಿಳಿಸಿದ್ದಾರೆ.

5 ಕಣಿವೆ ಜಿಲ್ಲೆಗಳ ಪೊಲೀಸ್ ಕಮಾಂಡೋಗಳು ಶಸ್ತ್ರ ಕೆಳಗಿಳಿಸಿದ್ದು, ತಮ್ಮ ಮೇಲೆ ದಾಳಿ ನಡೆದಾಗ ತಿರುಗೇಟು ನೀಡಲು ಅವಕಾಶ ಇರಬೇಕು ಎಂದು ಆಗ್ರಹಿಸಿದ್ದಾರೆ.

ಮೀಟಿ ಸಮುದಾಯದ ತೀವ್ರವಾದಿ ಸಂಘಟನೆಯಾದ ಅರಂಬೈ ತೆಂಗೊಲ್ ವಿರುದ್ಧ ಕ್ರಮಕ್ಕೆ ಅಧಿಕಾರಸ್ಥರಿಂದ ಯಾವುದೇ ನಿರ್ಬಂಧ ಇರಬಾರದು ಎಂದು ಪೊಲೀಸ್ ಕಮಾಂಡೋಗಳು ಆಗ್ರಹಿಸಿದ್ದಾರೆ.

ಮಂಗಳವಾರ ಮೀರಾ ಪೈಬಿಸ್ (ಮಹಿಳಾ ಸ್ವಯಂ ಸೇವಕರ ಗುಂಪು) ಹಾಗೂ ಅರಂಬೈ ತೆಂಗೊಲ್ ಸೇರಿಕೊಂಡು ಪೊಲೀಸ್ ಅಧಿಕಾರಿಯನ್ನು ಅಪಹರಿಸಿದ್ದವು. ಅವರ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದರು.

ಕೆಲ ಗಂಟೆಗಳ ನಂತರ ಅಧಿಕಾರಿಯನ್ನು ರಕ್ಷಿಸಲಾಗಿತ್ತು. ಅವರೀಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ವಿದ್ಯುತ್ ದರ ಇಳಿಕೆಗೆ ಆದೇಶ



ಬೆಂಗಳೂರು, ಫೆ. 28 – ವಿದ್ಯುತ್ ದರ ಇಳಿಕೆ ಮಾಡಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ.) ವಿದ್ಯುತ್ ದರ ಪರಿಷ್ಕರಣೆ ಆದೇಶ ಹೊರಡಿಸಿದೆ. ಇದರಿಂದ ಎಲ್ಲ ವರ್ಗದ ಗ್ರಾಹಕರಿಗೆ ವಿದ್ಯುತ್ ಬಿಲ್‌ನ ಹೊರೆಯ ಭಾರ ತುಸು ಇಳಿಯಲಿದೆ.

ಗೃಹ ಬಳಕೆಯವರಿಗೆ ಇಂಧನ ಬಳಕೆ ಮೇಲಿನ ದರ ಕಡಿತಗೊಳಿಸಿದರೆ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಬಳಕೆದಾರ ವರ್ಗದವರಿಗೆ ನಿಗದಿತ ಶುಲ್ಕದಲ್ಲೂ ಇಳಿಕೆ ಮಾಡಲಾಗಿದೆ.

ಆಯೋಗದ ಈ ಕ್ರಮದಿಂದ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಮೇಲಿನ ವಿದ್ಯುತ್ ಹೊರೆ ಅಲ್ಪಪ್ರಮಾಣದಲ್ಲಿ ಕಡಿಮೆಯಾಗಲಿದೆ. ಏಪ್ರಿಲ್ 1 ರಿಂದ ಹೊಸ ದರಗಳು ಜಾರಿಗೆ ಬರಲಿವೆ.

# ಸರ್ಕಾರಿ ಆಸ್ತಿ ಕಾವಲಿಗೆ 'ಲ್ಯಾಂಡ್ ಬೀಟ್' ತಂತ್ರಾಂಶ

## ಜಿಯೋಫೆನ್ಸಿಂಗ್, ಒತ್ತುವರಿದಾರರಿಗಿಲ್ಲ ಅವಕಾಶ : ಜಿಲ್ಲಾಧಿಕಾರಿ

ದಾವಣಗೆರೆ, ಫೆ.27- ಸರ್ಕಾರಿ ಆಸ್ತಿಗಳೆಂದರೆ ಯಾರು ಬೇಕಾದರೂ ಒತ್ತುವರಿ ಮಾಡಬಹುದು ಮತ್ತು ಯಾರೂ ಕೇಳುವವರಿಲ್ಲ ಎಂಬ ಭಾವನೆ ಇತ್ತು. ಆದರೆ, ಸರ್ಕಾರಿ ಆಸ್ತಿಗಳ ಕಾವಲಿಗೆ ಲ್ಯಾಂಡ್ ಬೀಟ್ ವ್ಯವಸ್ಥೆ ಜಾರಿಗೆ ಬಂದಿದ್ದು, ಮುಂದಿನ ದಿನಗಳಲ್ಲಿ ಸರ್ಕಾರಿ ಆಸ್ತಿಗಳ ಒತ್ತುವರಿಗೆ ಅವಕಾಶ ಇಲ್ಲ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ತಿಳಿಸಿದರು.

ಅವರು ಬುಧವಾರ ದಾವಣಗೆರೆ ಕಸಬಾ ಹೋಬಳಿಯ ದೊಡ್ಡಬಾತಿ



ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಸರ್ವೆ ನಂಬರ್ 34 ರಲ್ಲಿನ ಸರ್ಕಾರಿ ಸ್ಮಶಾನದ ಜಮೀನನ್ನು ಸ್ವತಃ ಆಪ್ ಮೂಲಕ ಸರ್ವೆ ಮಾಡಿ, ಒತ್ತುವರಿ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಜಿಯೋ ಫೆನ್ಸಿಂಗ್ ಮಾಡಿರುತ್ತಾರೆ.

ಸರ್ಕಾರಿ ಆಸ್ತಿಗಳ ಸಂರಕ್ಷಣೆ ಮಾಡಲು ಸರ್ಕಾರ ಹೊಸ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದೆ. ಈ ತಂತ್ರಾಂಶದ ಮೂಲಕ ಗ್ರಾಮ ಆಡಳಿತಾಧಿಕಾರಿಗಳು ಸರ್ಕಾರದ ಎಲ್ಲಾ ಜಮೀನುಗಳಿಗೆ ಜಿಯೋಫೆನ್ಸಿಂಗ್ ಮಾಡುತ್ತಾರೆ. ಈ ಆಪ್ ಮೂಲಕ ಜಿಯೋ ಫೆನ್ಸಿಂಗ್ ಮಾಡಿ, ಒತ್ತುವರಿ ಮಾಡಿದ್ದಲ್ಲಿ ಅಂತಹ ಆಸ್ತಿಗಳ ವಿವರ (4ನೇ ಪುಟಕ್ಕೆ)

# ಶಾಂತಿಸಾಗರದಲ್ಲಿ ಇನ್ನು 20 ದಿನಗಳಿಗೆ ಮಾತ್ರ ನೀರಿನ ಸಂಗ್ರಹ

ದಾವಣಗೆರೆ,ಫೆ. 28- ಶಾಂತಿ ಸಾಗರದಲ್ಲಿ (ಸೂಳೆಕೆರೆ) ಮುಂದಿನ 20 ದಿನಗಳಿಗೆ ಮಾತ್ರ ನೀರಿನ ಸಂಗ್ರಹವಿದ್ದು ಬೇಸಿಗೆಯಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆಗಾಗಿ ಅನಧಿಕೃತವಾಗಿ ಅಳವಡಿಸಿರುವ ಪಂಪ್‌ಸೆಟ್‌ಗಳನ್ನು ತೆರವು ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಬೆಸ್ಕಾಂ, ಗ್ರಾಮೀಣ ಕುಡಿಯುವ ನೀರು ವಿಭಾಗದ ಇಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಸೂಚನೆ ನೀಡಿದರು.

ವಿಪತ್ತು ನಿರ್ವಹಣೆ ಕುರಿತಂತೆ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದ ಅವರು ಶಾಂತಿಸಾಗರದ ಮೂಲಕ ಚನ್ನಗಿರಿ, ಚಿತ್ರದುರ್ಗ, ಹೊಳಲ್ಕೆರೆ, ಜಗಳೂರು ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಬಳಕೆಯಾಗುತ್ತಿದೆ ಎಂದರು.



**ಅನಧಿಕೃತ ಪಂಪ್‌ಸೆಟ್ ತೆರವಿಗೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಸೂಚನೆ**

ಶಾಂತಿಸಾಗರದಿಂದ ಎರಡು ಜಿಲ್ಲೆಗಳ ಪ್ರಮುಖ ಪಟ್ಟಣ, ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ ಕೆರೆಗೆ ಅನಧಿಕೃತವಾಗಿ ಪಂಪ್‌ಸೆಟ್ ಅಳವಡಿಸಿಕೊಂಡು ಅಕ್ರಮವಾಗಿ ನೀರೆತ್ತಲಾಗುತ್ತಿದೆ. ಇದರಿಂದ ನೀರಿನ ಸಂಗ್ರಹ ತುಂಬಾ ಇಳಿಕೆಯಾಗಿರುವುದರಿಂದ ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಸಮಸ್ಯೆಯಾಗಲಿದೆ ಎಂದರು.

ಬೆಸ್ಕಾಂನಿಂದ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಿಕೊಟ್ಟಿದ್ದರಿಂದ ರೈತರು ಅನಧಿಕೃತವಾಗಿ ಕೆರೆಯಲ್ಲಿನ ನೀರನ್ನು ಬಳಕೆ ಮಾಡುತ್ತಿದ್ದಾರೆ. ಅನಧಿಕೃತವಾಗಿ ಅಳವಡಿಸಿರುವ ವಿದ್ಯುತ್ ಪರಿವರ್ತಕಗಳನ್ನು ತೆರವು ಮಾಡಲು ಮತ್ತು ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲು ಬೆಸ್ಕಾಂ ಇಂಜಿನಿಯರ್‌ಗೆ ಸೂಚನೆ ನೀಡಿದರು. ಶಾಂತಿಸಾಗರದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುವುದರಿಂದ ಕಾಲುವೆ ಮೂಲಕ ನೀರು ಶೇಖರಣೆಗೆ ಕ್ರಮವಹಿಸಲಾಗುತ್ತದೆ ಎಂದರು.

ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಾದಲ್ಲಿ ಖಾಸಗಿ ಕೊಳವೆ ಬಾವಿ ಸಿಗದಿದ್ದಲ್ಲಿ ತಕ್ಷಣವೇ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಬೇಕು. ದೂರದ ಆಧಾರದ ಮೇಲೆ ಈಗಾಗಲೇ ಪ್ರತಿ ಟ್ಯಾಂಕರ್‌ಗೆ ರೂ.500, 600 ಹಾಗೂ ರೂ.900ರವರೆಗೆ ದರ ನಿಗದಿ ಮಾಡಲಾಗಿದೆ. ಟೆಂಡರ್ ಕರೆಯಲಾಗಿಲ್ಲ ಎಂದು ತಾಂತ್ರಿಕ ನೆಪವೊಡ್ಡಿ ಜನರಿಗೆ ನೀರು ಕೊಡದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬೇಸಿಗೆ ಆರಂಭವಾಗಿದ್ದು ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ, ಸಾಂಕ್ರಾಮಿಕ ಕಾಯಿಲೆಗಳು ಸೇರಿದಂತೆ ವಿಕೋಪದಿಂದಾಗುವ ಸಮಸ್ಯೆಗಳನ್ನು ಎದುರಿಸಲು ಅಧಿಕಾರಿಗಳು ಸದಾ ಸನ್ನದ್ಧರಾಗಿರಬೇಕು. ಯಾವುದೇ ಅಧಿಕಾರಿಗಳು ಕೇಂದ್ರಸ್ಥಾನ ಬಿಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಎಲ್ಲೆಲ್ಲಿ ಕುಡಿಯುವ ನೀರಿನ ಕೊಳವೆಬಾವಿಗಳಲ್ಲಿ (4ನೇ ಪುಟಕ್ಕೆ)

## ಕೆಲಸಕ್ಕೆ ಬೇಕಾಗಿದ್ದಾರೆ

ITI ಪಾಸ್/ಫೇಲ್ ಆದ
6 ಜನ ಹುಡುಗರು ಬೇಕಾಗಿದ್ದಾರೆ.

ಸಂಪರ್ಕಿಸಿ :

**ಆಪ್ಟಿಕಲ್ ಪ್ಯಾರಾಡೈಸ್**

ಎಂ.ಎಂ.ಕೆ ಕಾಂಪ್ಲೆಕ್ಸ್,
ಎ.ವಿ.ಕೆ. ಕಾಲೇಜ್ ರೋಡ್, ದಾವಣಗೆರೆ.

ಮೊ. : 88614 29090
79754 47909

# ದೇಸೀಯ ತಂತ್ರಜ್ಞಾನವನ್ನು ಆಧುನಿಕ ವಿಧಾನಗಳೊಂದಿಗೆ ನಾವೀನ್ಯಗೊಳಿಸಬೇಕು

ಚಿತ್ರದುರ್ಗ, ಫೆ.28- ಮತ, ಧರ್ಮಗಳ ಬೇಲಿಯನ್ನು ಕಿತ್ತು ಹಾಕಿ ಸಾವಿರಾರು ವರ್ಷಗಳಿಂದ ಅನ್ವೇಷಿಸಿಕೊಂಡು ಬಂದಿರುವ ದೇಸೀಯ ತಂತ್ರಜ್ಞಾನವನ್ನು ಆಧುನಿಕ ಸಂಶೋಧನಾ ವಿಧಾನಗಳ ಮೂಲಕ ನಾವೀನ್ಯಗೊಳಿಸಬೇಕೆಂದು ಚಿಂತಕ ಮತ್ತು ಸಾಹಿತಿ ಡಾ.ಜಿ.ಎನ್. ಮಲ್ಲಿಕಾರ್ಜುನಪ್ಪ ಹೇಳಿದರು.



ಚಿಂತಕ ಮತ್ತು ಸಾಹಿತಿ ಡಾ.ಜಿ.ಎನ್.ಮಲ್ಲಿಕಾರ್ಜುನಪ್ಪ

ಚಿತ್ರದುರ್ಗ ಸೈನ್ಸ್ ಫೌಂಡೇಷನ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಬೆಂಗಳೂರು ಇದರ ಸಹಯೋಗದೊಂದಿಗೆ ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಉದ್ಘಾಟಿಸಿ, ವಿಕಸಿತ ಭಾರತಕ್ಕಾಗಿ ದೇಸೀಯ ತಂತ್ರಜ್ಞಾನ ಎಂಬ ವಿಷಯ ಕುರಿತು ಮಾತನಾಡಿದರು.

ಬಡತನ, ನಿರುದ್ಯೋಗ, ಮಾಲಿನ್ಯ, ಮೌಢ್ಯ ಮತ್ತು ಬ್ರಹ್ಮಾಂಡ ಭ್ರಷ್ಟಚಾರವನ್ನು ಹೊತ್ತುಕೊಂಡು ಭಾರತ ಎಂದಿಗೂ ವಿಕಸಿತವಾಗಲು ಸಾಧ್ಯವಿಲ್ಲ. ಅದು ಹಾಗೆ ಆಗಬೇಕಾದರೆ ನಮ್ಮ ಸರ್ವಾಂಗೀಣ ಅಭಿವೃದ್ಧಿ ಸಂವಿಧಾನ ಆಶ್ರಿತವಾಗಿರಬೇಕು. ಬಂಡವಾಳ ಮತ್ತು ತಂತ್ರಜ್ಞಾನಗಳಲ್ಲಿ ಸ್ವಾವಲಂಬನೆ ಸಾಧಿಸಬೇಕಾದರೆ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಚಿಂತನೆಗಳನ್ನು ತಾತ್ವಿಕ ಅಡಿಪಾಯವಾಗಿಟ್ಟುಕೊಳ್ಳಬೇಕೆಂದು ತಿಳಿಸಿದರು.

ಕೃಷಿ, ಕೈಗಾರಿಕೆ ಮೂಲ ಸೌಲಭ್ಯಗಳು ನೀರಾವರಿ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಎಲ್ಲಿ ದೊಡ್ಡ ಪ್ರಮಾಣದ ಉತ್ಪಾದನೆ ಮತ್ತು ವಿವರಣೆಗಳು ಅನಿವಾರ್ಯವೋ ಅವುಗಳನ್ನು ಹೊರತು ಪಡಿಸಿ, ಉಳಿದ ಸಂದರ್ಭಗಳಲ್ಲಿ ದೇಸೀಯ ತಂತ್ರಜ್ಞಾನ ಬಳಸುವುದರಿಂದ ವ್ಯಕ್ತಿ, ಸಂಸ್ಥೆ ಮತ್ತು ದೇಶ ಸಾಲದ ಹೊರೆಯಿಂದ ಹಾಗೂ ಅನಪೇಕ್ಷಿತ ಅವಲಂಬನೆಯಿಂದ ಹೊರಬರಬಹುದು ಎಂದರು.

ಚಿತ್ರದುರ್ಗ ಸೈನ್ಸ್ ಫೌಂಡೇಷನ್ ನಿರ್ದೇಶಕ ಪ್ರೊ.ಈ.ರುದ್ರಮುನಿ ಮಾತನಾಡಿ, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆಯ ಕೊರತೆ ಶಿಕ್ಷಕರುಗಳಲ್ಲಿ ಎದ್ದು ಕಾಣುತ್ತಿದೆ. ಶಿಕ್ಷಕರಾದವರು ಮಕ್ಕಳಿಗೆ ವಿಜ್ಞಾನವನ್ನು ಸರಿಯಾಗಿ ಬೋಧಿಸಬೇಕು. ಇಲ್ಲದಿದ್ದರೆ ನೋಬೆಲ್ ಪಾರಿತೋಷಕಗಳನ್ನು ಪಡೆದುಕೊಳ್ಳುವುದು ಕಠಿಣ. ವೈಜ್ಞಾನಿಕ ಮನೋಭಾವನೆ, ಆಸಕ್ತಿ, ಚಿಂತನೆಯನ್ನು ಮಕ್ಕಳಲ್ಲಿ ಮೂಡಿಸಬೇಕಿದೆ. ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಅರಿವು ಮೂಡಿಸುವ ಹೊಣೆಗಾರಿಕೆ ಶಿಕ್ಷಕರುಗಳ ಮೇಲಿದೆ ಎಂದು ಹೇಳಿದರು.

ಕೇವಲ ಪರೀಕ್ಷಾ ದೃಷ್ಟಿಯಿಂದ ಓದುವುದಕ್ಕಿಂತಲೂ ಮಿಗಿಲಾಗಿ ಪರೀಕ್ಷೆಯನ್ನು ಮೀರಿ ಕಲಿಯುವುದು ಬಹಳಷ್ಟಿದೆ. ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಭದ್ರವಾದ ಬುನಾದಿ ಹಾಕಬೇಕಿದೆ. ಶಿಕ್ಷಕರ ಮೇಲೆ ಮಹತ್ತರ ಜವಾಬ್ದಾರಿಯಿದೆ. ಅದರಿಂದ ವಂಚಿತರಾದರೆ ದೇಶಕ್ಕೆ ದ್ರೋಹ ಮಾಡಿದಂತಾಗುತ್ತದೆ ಎಂದು ತಿಳಿಸಿದರು.

ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕರಾದ ಶ್ರೀಮತಿ ಸುಜಾತ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಪ್ರಕೃತಿಯ ವಿರುದ್ಧ ಹೋಗುವ ಬದಲು ಪ್ರಕೃತಿ ನಮಗೆ ನೀಡಿರುವ ಸಂಪತ್ತನ್ನು ಹಾಳು ಮಾಡದೇ ಉಳಿಸಿಕೊಳ್ಳಬೇಕಾಗಿದೆ. ಪ್ರಶಿಕ್ಷಣಾರ್ಥಿಗಳು ವೈಜ್ಞಾನಿಕ ಮನೋಭಾವನೆ ಮೈಗೂಡಿಸಿಕೊಳ್ಳಬೇಕು. ಮಕ್ಕಳ ಮನಸ್ಸಿಗೆ ನಾಟುವ ರೀತಿಯಲ್ಲಿ ಪರಿಣಾಮಕಾರಿ ಬೋಧನೆ ಮುಖ್ಯ.

ವಿಜ್ಞಾನ ಎಂದರೆ ಒಂದು ಡಿಸೈನ್, ಮಿಂಚು, ಗುಡುಗಿನಲ್ಲಿ ಒಂದು ರೀತಿಯ ಆಕರ್ಷಣೆಯಿದೆ. ಕವಿ ಹೃದಯ, ವಿಜ್ಞಾನದ ಹೃದಯ ಎರಡೂ ಒಂದೇ ಎಂದು ನುಡಿದರು.

ಚಿತ್ರದುರ್ಗ ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಹೆಚ್.ಎಸ್.ಟಿ.ಸ್ವಾಮಿ ಮಾತನಾಡಿ, ಬೆಳಕಿನ ಚದುರುವಿಕೆ ಕುರಿತು ಸರ್ ಸಿ.ವಿ. ರಾಮನ್‌ರವರು 1928 ರಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿ ಪ್ರಬಂಧ ಮಂಡಿಸಿದರು. ಆದರೆ, ಅವರಿಗೆ 1930 ರಲ್ಲಿ ನೋಬೆಲ್ ಪ್ರಶಸ್ತಿ ಸಿಕ್ಕಿತು. ಅಲ್ಲಿಂದ ಇಲ್ಲಿಯ ತನಕ ಯಾರೂ ಮತ್ತೆ ನೋಬೆಲ್ ಪ್ರಶಸ್ತಿಯನ್ನು ಪಡೆಯಲು ಆಗಿಲ್ಲ. ಅದಕ್ಕೆ ಕಾರಣಗಳು ಸಾಕಷ್ಟಿರಬಹುದು. 1986 ರಿಂದ ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಪ್ರವಾಚಕ ಜಿ.ಆರ್.ತಿಪ್ಪೇಶಪ್ಪ, ರಾಜಣ್ಣ ವೇದಿಕೆಯಲ್ಲಿದ್ದರು. ಪ್ರಶಿಕ್ಷಣಾರ್ಥಿ ಹೇಮಲತ ಪ್ರಾರ್ಥಿಸಿದರು. ಗೌತಮಿ ಸ್ವಾಗತಿಸಿದರು. ಭಾರತಿ ನಿರೂಪಿಸಿದರು.

# ಇಂದು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಉದ್ಘಾಟನೆ

ಹರಪನಹಳ್ಳಿ, ಫೆ. 28 - ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ (ಬಳ್ಳಾರಿ) ಇದರ ಅಧೀನದಲ್ಲಿ ಹರಪನಹಳ್ಳಿ ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಕಚೇರಿ ಉದ್ಘಾಟನಾ ಕಾರ್ಯಕ್ರಮ ನಾಳೆ 29ರ ಗುರುವಾರ ಸಂಜೆ 4ಗಂಟೆಗೆ ನಡೆಯಲಿದೆ ಎಂದು ವಿ.ವಿ. ಸಿಂಡಿಕೇಟ್ ಸದಸ್ಯ ಆರ್. ಸುರೇಶ್ ಸಜ್ಜನ್ ತಿಳಿಸಿದರು.



ಹರಪನಹಳ್ಳಿ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಕೊಟ್ಟೂರು ಹಾಗೂ ಹರಪನಹಳ್ಳಿ ಒಳಗೊಂಡು ಸ್ನಾತಕೋತ್ತರ ಅಧ್ಯಯನ ಕೇಂದ್ರ ತೆರೆಯಲು ವಿಶ್ವವಿದ್ಯಾಲಯ ತೀರ್ಮಾನಿಸಿದ್ದು, ಪ್ರಸ್ತುತ ತಾತ್ಕಾಲಿಕವಾಗಿ ಕಚೇರಿಯನ್ನು ಆರಂಭಿಸಲಾಗುವುದು, ಮುಂದಿನ ಶೈಕ್ಷಣಿಕ ವರ್ಷದಿಂದ ದಾಖಲಾತಿ ಪ್ರಾರಂಭವಾಗಲಿದೆ ಎಂದು ಹೇಳಿದರು.

ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹಾಗೂ ಸಂಸದ ವೈ. ದೇವೇಂದ್ರಪ್ಪ ಅವರು ಹರಪನಹಳ್ಳಿಯಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ತೆರೆಯುವಂತೆ ವಿ.ವಿ.ಗೆ ಹಾಗೂ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಈ ಬಗ್ಗೆ ವಿ.ವಿ. ಹರಪನಹಳ್ಳಿಯಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ತೆರೆಯಲು ತೀರ್ಮಾನ ತೆಗೆದುಕೊಂಡು, ಭೇಟಿ ನೀಡಿ ಪರಿಶೀಲಿಸಿದಾಗ, ಈ ಭಾಗದಲ್ಲಿ ವಿದ್ಯಾರ್ಥಿಗಳು ದಾವಣಗೆರೆ, ಬಳ್ಳಾರಿ, ಹೊಸಪೇಟೆ, ಧಾರವಾಡ ಸೇರಿದಂತೆ ಇತರೆ ವಿವಿಗಳಿಗೆ ಅಧ್ಯಯನ ಮಾಡಲು ತೆರಳುತ್ತಿರುವ ಬಗ್ಗೆ ಮಾಹಿತಿ ಕಲೆ ಹಾಕಲಾಯಿತು, ನಂತರ ವಿವಿಧ ಸಂಘ, ಸಂಸ್ಥೆಗಳಿಂದ ಅಧ್ಯಯನ ಕೇಂದ್ರವನ್ನು ತೆರೆಯುವಂತೆ ಒತ್ತಡ ಬಂದ ಹಿನ್ನೆಲೆಯಲ್ಲಿ ಕಚೇರಿಯನ್ನು ತೆರೆಯುವ ಮೂಲಕ ಅಧ್ಯಯನ ಕೇಂದ್ರಕ್ಕೆ ಚಾಲನೆ ನೀಡಲಾಗುವುದು ಎಂದರು.

ವಿ.ವಿ. ಸಿಂಡಿಕೇಟ್ ಸದಸ್ಯ ಪ್ರೊ. ಟಿ.ಎಂ. ರಾಜಶೇಖರ್ ಮಾತನಾಡಿ, ಹರಪನಹಳ್ಳಿ ತಾಲ್ಲೂಕು ಹಿಂದುಳಿದಿದ್ದು, ಅದರಲ್ಲೂ ಹೆಚ್ಚಾಗಿ ಪ. ಜಾತಿ, ಪ. ಪಂಗಡ, ಹಿಂದುಳಿದ ವರ್ಗಗಳ ಕೃಷಿ, ಕೂಲಿಕಾರರನ್ನು ಹೊಂದಿದ್ದು ಇವರ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದರು, ಈ ಬಗ್ಗೆ ಅನೇಕ ವರ್ಷಗಳಿಂದ ವಿ.ವಿ. ಅಧ್ಯಯನ ಕೇಂದ್ರ ತೆರೆಯಲು ಒತ್ತಡ ತರಲಾಗುತ್ತಿದ್ದು, ನಾವು ಸದಸ್ಯರಾದ ಬಳಿಕ ಮತ್ತು ಇಲ್ಲಿನ ಸಂಸದರು, ಶಾಸಕರ ಮನವಿಯಂತೆ ಅಧ್ಯಯನ ಕೇಂದ್ರ ಆರಂಭವಾಗುತ್ತಿರುವುದು ಸಂತಸದ ವಿಷಯವಾಗಿದ್ದು, ಅಧ್ಯಯನ ಕೇಂದ್ರದ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು.

ಕಚೇರಿ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಸದ ವೈ. ದೇವೇಂದ್ರಪ್ಪ, ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ವಿ.ವಿ. ಕುಲಪತಿ, ಅನಂತ್ ಎಲ್.ಝುಂಡೇಕರ್, ಕುಲ ಸಚಿವ ಎಸ್.ಎನ್. ರುದ್ರೇಶ್, ಓ. ರಮೇಶ್ ಓಲೇಕಾರ, ವಿತ್ತ ಅಧಿಕಾರಿ ಪ್ರೊ. ಸದ್ಯೋಜಾತಪ್ಪ, ವಿ.ವಿ. ಸಿಂಡಿಕೇಟ್ ಸದಸ್ಯ ರಮೇಶ ಬಿ. ಸವದಿ ಸೇರಿದಂತೆ, ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಗುಂಡಗತ್ತಿ ಕೊಟ್ರಪ್ಪ, ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು

ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟ ವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಎಂ.ಸಿ.ಸಿ. ಬಿ ಬ್ಲಾಕ್, ಐಎಂಎ ಸಭಾಂಗಣದ ಹಿಂದೆ ಓಂಕಾರಮ್ಮ ಪ್ರಕೃತಿ ಚಿಕಿತ್ಸಾ ಯೋಗ ಕೇಂದ್ರದಲ್ಲಿ ಇಂದಿನಿಂದ ಮಾರ್ಚ್ 3ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯ ಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

# ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ ಸಮಾರೋಪ



ದಾವಣಗೆರೆ, ಫೆ. 28- ಸರ್ಕಾರದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಕರ್ನಾಟಕ ಬ್ಯಾಂಕ್ ಸಹಭಾಗಿತ್ವದಲ್ಲಿ ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಯೋಜಿ ಸಲಾಗಿದ್ದ ಮುಂದುವರೆದ ಶಿಕ್ಷಣ ಹಾಗೂ 21ನೇ ಶತಮಾನದ ಸಾಫ್ಟ್ ಸ್ಕಿಲ್ಸ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಈಚೆಗೆ ನಡೆಯಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಬೆಳಗಾವಿ ವಿಟಿಯು ವಿಶೇಷ ಅಧಿಕಾರಿ ಸದಾಶಿವ ಹಾಲಬಾವಿ ಉಪಸ್ಥಿತರಿದ್ದು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು. ಫಲಿತಾಂಶ ಆಧಾರಿತ ಶಿಕ್ಷಣವನ್ನು ಅಳವಡಿಸಿಕೊಳ್ಳುವುದರ ಬಗ್ಗೆ ವಿಸ್ತಾರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ವಯಂ ಆವಿಷ್ಕಾರ, ಕಲಿಕೆಯ ಚಕ್ರವನ್ನು ಅರ್ಥ ಮಾಡಿಕೊಳ್ಳುವುದು, ವಿಮರ್ಶಾತ್ಮಕ ಚಿಂತನೆ, ಸಾಕ್ಷರತೆ ಕೌಶಲ್ಯ, ಜೀವನ ಕೌಶಲ್ಯ, ವಿನ್ಯಾಸ ಚಿಂತನೆಗಳಂತಹ ಅಮೂಲ್ಯ ವಿಷಯಗಳ ಬಗ್ಗೆ ತಜ್ಞರಾದ ಅವಿನಾಶ್, ನವಿಲೇ ಕೆವಿನ್ ರೋಡ್ರಿಗರ್ಸ್ ರಿಂದ ತರಬೇತಿ ನೀಡಿದರು. ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಲಹೆಗಾರ ಡಾ. ಮಂಜಪ್ಪ ಸಾರಥಿ, ಡಾ. ಮಧುಕೇಶ್ವರ ಎನ್, ಡೀನ್, ಡಾ. ಗಣೇಶ್ ಎನ್.ವೈ. ಸಂಯೋಜಕರು ಹಾಗು ಎಲ್ಲಾ ಅಧ್ಯಾಪಕರುಗಳು ಉಪಸ್ಥಿತರಿದ್ದರು.

# ಹರಿಹರ : ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಸಮಿತಿಗೆ ಆಯ್ಕೆ



ಹರಿಹರ, ಫೆ. 28 - ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಸಲೀಮ್ ಹಂಚಿನಮನಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಸೈಯದ್ ಇಸ್ಮಾಯಿಲ್ ಪಾಷಾ ಇವರ ಸೂಚನೆ ಮೇರೆಗೆ ಕೆಳಕಾಣಿಸಿದಂತೆ ಸಂಘದ ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ರಾಜ್ಯ ಪ್ರತಿನಿಧಿ ಜಹಾನ್ ಆರಾ ಬೇಗಮ್ ತಿಳಿಸಿದ್ದಾರೆ.

ಅಧ್ಯಕ್ಷ ಎಂ. ಮೊಹಮ್ಮದ್ ಅಲಿ ಹುಲಿ ಹಳ್ಳಿ, ಉಪಾಧ್ಯಕ್ಷರು ಶಂಷುದ್ದೀನ್ ಖಾನ್, ಸಮೀನಾ ಬಾನು, ಕಾರ್ಯದರ್ಶಿ ಎ. ಜಾಕೀರ್ ಹುಸೇನ್ ಜಂಟಿ ಕಾರ್ಯದರ್ಶಿ ನಸ್ರೀನ್ ಬಾನು, ಉಪ ಕಾರ್ಯದರ್ಶಿ ಎನ್.ಜಿ. ಇಬ್ರಾಹೀಂ ಖಲೀಲ್ ಉಲ್ಲಾ, ಖಜಾಂಚಿ ರಹೀಮ್ ಖಾನ್, ರಾಜ್ಯ ಪ್ರತಿನಿಧಿಗಳಾಗಿ- ಜಹಾನ್ ಆರಾ ಬೇಗಮ್, ಮುಷ್ತಾಖ್ ಖಾಜಿ, ಸಂಘಟನಾ ಕಾರ್ಯದರ್ಶಿಗಳಾಗಿ ಡಾ. ಅತಿಯಾ ಕೌಸರ್, ಸೈಯದ್ ಜಾಕೀರ್ ಹುಸೇನ್, ಡಾ. ಉಮರ್ ಫಾರೂಖ್, ರಶೀದ್ ಖಾನ್, ಇರ್ಷಾದ್ ಅಲಿ, ಶಾಕೀರ್ ಉಲ್ಲಾ ಶರೀಫ್, ಡಿ. ಬಾಷಾ, ಸೈಯದಾ ಕೌಸರ್ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಮಾಜಿ ಜಿಲ್ಲಾಧ್ಯಕ್ಷ ಸೈಯದ್ ಜುನೇದ್ ಪಾಷಾ, ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷ ಅಶ್ಫಾಖ್ ಅಹ್ಮದ್, ಚನ್ನಗಿರಿ ತಾಲ್ಲೂಕು ಘಟಕ ಅಧ್ಯಕ್ಷ ಕೆ. ಜಮೀಲ್ ಅಹ್ಮದ್, ಪದಾಧಿಕಾರಿಗಳಾದ ಅಬ್ದುಲ್ ಸಲಾಂ, ದಾದಾಪೀರ್ ಇದ್ದರು.

# ಹರಪನಹಳ್ಳಿ : ಧಾರ್ಮಿಕ ಕಾರ್ಯಕ್ರಮ



ಹರಪನಹಳ್ಳಿ, ಫೆ. 28 - ಪಟ್ಟಣದ ಜೋಯಿಸರಕೇರಿಯಲ್ಲಿರುವ ಶಂಕರ ಮಠದಲ್ಲಿ ಮಾರ್ಚ್ 2 ಮತ್ತು 3 ರಂದು ಎರಡು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಶಂಕರ ಸೇವಾ ಸಮಿತಿಯ ಅಧ್ಯಕ್ಷ ಯು. ರಾಘವೇಂದ್ರ ಪ್ರಸಾದ್ ತಿಳಿಸಿದರು.

ಮಾರ್ಚ್ 2 ರಂದು ಹರಿಹರಪುರ ಆದಿ ಶಂಕರಚಾರ್ಯ ಶಾರದಾ ಲಕ್ಷ್ಮಿನರಸಿಂಹ ಕ್ಷೇತ್ರದ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ ನೇತೃತ್ವದಲ್ಲಿ ಶೋಭಯಾತ್ರೆ ನಡೆಯಲಿದೆ.


ಮಾರ್ಚ್ 3 ರಂದು ಮಠದಲ್ಲಿ ನೂತನವಾಗಿ ನವೀಕರಣಗೊಂಡ ಶ್ರೀ ಶಂಕರ ಭಗವತ್ಪಾದಾಚಾರ್ಯರ ಮೂರ್ತಿ ಹಾಗೂ ನೂತನ ಶಿಲಾ ಮಂಟಪ ಶ್ರೀ ಗುರುದೇವ ದತ್ತಾತ್ರೇಯ ನೂತನ ಶಿಲಾ ವಿಗ್ರಹ ಹಾಗೂ ಶ್ರೀ ಮಹಾಗಣಪತಿ ಮತ್ತು ಶಾರದಾಂಬ ದೇವಿಯ ಪುನರ್ ಪ್ರತಿಷ್ಠಾಪನೆ ಕಾರ್ಯ ಜರುಗಲಿದೆ ಎಂದು ಶಂಕರ ಸೇವಾ ಸಮಿತಿಯ ಎಸ್. ಶ್ಯಾಮಸುಂದರ ಭಟ್, ಲಕ್ಷ್ಮಿನಾರಾಯಣ್ ಭಟ್, ಜೆ. ಲಕ್ಷ್ಮಣ ಭಟ್, ಬಿ. ನಾಗರಾಜ, ಜಿ.ವಿ.ವೆಂಕಟೇಶ್, ಯು. ದತ್ತಾತ್ರೇಯ, ಹೆಚ್. ಲಿಂಗ ಮಲ್ಲಾರಿ, ಹೆಚ್. ಗಿರೀಶ್ ಸೋಮಯಾಜಿ, ಯು.ಹೆಚ್. ನರಸುಬಾಯಿ, ಎಸ್. ರೋಹಿಣಿ, ಜಿ.ವಿ.ರಾಜೇಶ್ವರಿ, ಆರ್. ಸಂಧ್ಯಾ, ಹೆಚ್. ಮಂಜುಳಾ, ಯು. ಅರುಣಲತಾ, ಯು.ಹೆಚ್. ವಾಣಿ ತಿಳಿಸಿದ್ದಾರೆ.

# ಲೋಕಿಕೆರೆಯಲ್ಲಿ ಇಂದು ಮಹಾಪೂಜೆ

ದಾವಣಗೆರೆ ತಾಲ್ಲೂಕಿನ ಲೋಕಿಕೆರೆ ಗ್ರಾಮದ ಸಮೀಪವಿರುವ ತ್ರಿಕೂಟಾಚಲ ದೇವಾಲಯದಲ್ಲಿ ಶ್ರೀ ಉಮಾಮಹೇಶ್ವರಸ್ವಾಮಿ, ಶ್ರೀ ವಿಜಯದುರ್ಗಾಪರಮೇಶ್ವರಿ ಅಮ್ಮ, ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವರುಗಳ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 4.45 ರಿಂದ 5.15 ರವರೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ವಿಜಯದುರ್ಗಾಪರಮೇಶ್ವರಿ ಅಮ್ಮನವರ ಪ್ರತಿಷ್ಠೆ ಪೂಜಾಂಗ ಹೋಮ, ತತ್ವಕಲಾ ಹೋಮ, ಕನ್ನಿಕೆ, ಸುಹಾಸಿನಿ, ದಂಪತಿ ಆರಾಧನೆ, ಸಂಜೆ 5 ಗಂಟೆಗೆ ಮಹಾಪೂಜೆ, ಅಷ್ಟಾವಧಾನ ಸೇವೆ ನಡೆಯಲಿದೆ.

# ಕಬಡ್ಡಿ : ನಗರದಲ್ಲಿ ಇಂದು ತಂಡಗಳ ಆಯ್ಕೆ ಪ್ರಕ್ರಿಯೆ

ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಹೊನಲು-ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಮಾರ್ಚ್ 28 ರಿಂದ ಮಾರ್ಚ್ 31 ರವರೆಗೆ ಪ್ರತಿದಿನ ಸಂಜೆ 5 ರಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.



ಬಹುಮಾನದ ಜೊತೆಗೆ ಆಕರ್ಷಕ ಜನಪ್ರಿಯ ಟ್ರೋಫಿ

ಪಂದ್ಯಾವಳಿಯಲ್ಲಿ ಒಟ್ಟು 8 ತಂಡಗಳು ಭಾಗವಹಿಸುತ್ತಿದ್ದು, ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ಪಂದ್ಯಗಳನ್ನು ಆಡಿಸಲಾಗುವುದು. ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಕ್ಕೆ 1 ಲಕ್ಷ ರೂ., ದ್ವಿತೀಯ ಸ್ಥಾನ ಪಡೆದ ತಂಡಕ್ಕೆ 50 ಸಾವಿರ ರೂ., ಹಾಗೂ ತೃತೀಯ ಮತ್ತು ಚತುರ್ಥ ಸ್ಥಾನ ಪಡೆದ ತಂಡಗಳಿಗೆ ಕ್ರಮವಾಗಿ 25 ಸಾವಿರಗಳ ಬಹುಮಾನದ ಜೊತೆಗೆ ಆಕರ್ಷಕ ಟ್ರೋಫಿಗಳನ್ನು ನೀಡಲಾಗುವುದು.

ಈ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ ಸರ್ವೋತ್ತಮ ಆಟಗಾರ, ಉತ್ತಮ ದಾಳಿಗಾರ, ಉತ್ತಮ ಹಿಡಿತಗಾರ ಇವರಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುವುದು ಎಂದು ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಜಯಪ್ರಕಾಶ್ ಗೌಡ ತಿಳಿಸಿದ್ದಾರೆ.

ಪಂದ್ಯಾವಳಿಯಲ್ಲಿ ಭಾಗವಹಿಸುವ 08 ತಂಡಗಳ ಆಯ್ಕೆ ಪ್ರಕ್ರಿಯೆಯನ್ನು (ಹರಾಜು) ನಗರದ ಎಸ್.ಎಸ್. ಬಡಾವಣೆಯಲ್ಲಿರುವ ಶ್ರೀ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಬೆಳಿಗ್ಗೆ 9.30 ಗಂಟೆಗೆ ನಡೆಸಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ ರಾಕೇಶ್ ಮೊ: 9448835907, 9741504529

# ಶ್ರೀ ಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿಯಲ್ಲಿ ಕೊಟ್ಟೂರು ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆ

ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ-ಅರಸಿಕೆರೆ ರಸ್ತೆ ಬದಿಯ ಶ್ರೀಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿ ದೇವಾಲಯದ ಆವರಣದಲ್ಲಿ ಮಾರ್ಚ್ 1 ಮತ್ತು 2 ರಂದು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದರ್ಶನಕ್ಕೆ ತೆರಳುವ ಸಮಸ್ತ ಪಾದಯಾತ್ರಿಗಳಿಗೆ ದೇವಸ್ಥಾನ ಸಮಿತಿ ಟ್ರಸ್ಟ್ ಹಾಗೂ ಪೂಜ್ಯರಾದ ಶ್ರೀ ಬಸವರಾಜ ಗುರೂಜಿಯವರು ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ.

## ಇಂದು ಹರಿಹರ ನಗರಸಭೆ ಬಜೆಟ್

ಹರಿಹರ ನಗರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11-30 ಕ್ಕೆ ನಗರಸಭೆ ಆಡಳಿತಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ 2024-25ನೇ ಸಾಲಿನ ಬಜೆಟ್ ಮಂಡನೆ ಆಗಲಿದೆ ಎಂದು ಪೌರಾಯುಕ್ತ ಐಗೂರು ಬಸವರಾಜ್ ತಿಳಿಸಿದ್ದಾರೆ.

## ದೇವರಬೆಳಕೆರೆಯಲ್ಲಿ ಇಂದು ರಥೋತ್ಸವ



ಹರಿಹರ ತಾಲ್ಲೂಕಿನ ದೇವರಬೆಳಕೆರೆ ಗ್ರಾಮದಲ್ಲಿ ಇಂದು ಸಂಜೆ 4.30 ಕ್ಕೆ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ರಥೋತ್ಸವ ಜರುಗಲಿದೆ.

ನಾಳೆ ಶುಕ್ರವಾರ ಸಂಜೆ 4 ಗಂಟೆಗೆ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ನಡೆಯಲಿವೆ. ಅಂದು ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ಓಕುಳಿ ನಡೆಯಲಿದೆ.

# ಹೊನ್ನಾಳಿ : ಯಕ್ಷಗಾನ ಪ್ರದರ್ಶನ

ಹೊನ್ನಾಳಿ, ಫೆ. 28 - ತೀರ್ಥಹಳ್ಳಿ ತಾಲ್ಲೂಕಿನ ಶ್ರೀ ಕ್ಷೇತ್ರ ಅಲಸೆ ಶ್ರೀ ಚೆಂಡಿಕೇಶ್ವರ, ಶ್ರೀಶಂಕರೇಶ್ವರ ಕೃಪೆಯಿಂದ ಶ್ರೀನಾಗೇಶ್ವರಿ, ಶ್ರೀಸುಬ್ರಮಣ್ಯ ಕೃಪಾಶೀರ್ವಾದದಿಂದ, ಯಕ್ಷಗಾನ ಮೇಳದಿಂದ, ಶ್ರೀ ಚಂದ್ರಹಾಸ ಚರಿತ್ರೆಯ ಯಕ್ಷಗಾನ ಪ್ರದರ್ಶನ ಮಾರ್ಚ್ 1 ರ ಶುಕ್ರವಾರ ಪಟ್ಟಣದ ಶ್ರೀ ದುರ್ಗಮ್ಮ-ಮರಿಯಮ್ಮ ದೇವಸ್ಥಾನದ ಆವರಣದಲ್ಲಿ ರಾತ್ರಿ 7 ಗಂಟೆಯಿಂದ 12.30ರ ವರೆಗೆ ನಡೆಯಲಿದೆ ಎಂದು ಹಾಲಮತ ಸಮಾಜದ ತಾಲ್ಲೂಕು ಅಧ್ಯಕ್ಷೆ ಪಂಕಜ ಅರುಣಕುಮಾರ ತಿಳಿಸಿದ್ದಾರೆ.

ಪಟ್ಟಣದ ದುರ್ಗಮ್ಮ-ಮರಿಯಮ್ಮ ದೇವಸ್ಥಾನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಶ್ರೀಕ್ಷೇತ್ರ ಅಲಸೆ ಧರ್ಮದರ್ಶಿ ಚಿದಂಬರ ಭಟ್ ಗೌರವ ವ್ಯವಸ್ಥಾಪಕರು, ಶಿವಶಂಕರಭಟ್ ಗುಡ್ಡೆಪಾಲ್, ಇವರಿಂದ ಈಗಾಗಲೇ ಪಟ್ಟಣದ ಕನಕ ರಂಗಮಂದಿರದಲ್ಲಿ 2 ವರ್ಷ, ಹೊಸಕೇರಿ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಯಕ್ಷಗಾನ ಪ್ರದರ್ಶನ ನಡೆದು ಈ ವರ್ಷ ಶ್ರೀ ದುರ್ಗಮ್ಮ-ಮರಿಯಮ್ಮ ದೇವಸ್ಥಾನ ಆವರಣದಲ್ಲಿ ನಡೆಯಲಿದೆ. ರಂಗ ವೈಭವ ಸಾಕ್ಷಾಧಾರಿತ ಕಲಾವಿದರಿಂದ ಶ್ರೀ ಚಂದ್ರಯಾನ ಚರಿತ್ರೆ, ಯಕ್ಷಗಾನ ಪ್ರದರ್ಶನ ನಡೆಯಲಿದೆ, ಶ್ರೀ ನಾಗೇಶ್ವರಿ ಅಮ್ಮನವರಿಗೆ ಉಡಿ ತುಂಬುವ ವಿಶೇಷ ಕಾರ್ಯಕ್ರಮ ನಡೆಯಲಿದೆ.

ಪತ್ರಿಕಾಗೋಷ್ಠೀಯಲ್ಲಿ ನರಸಿಂಹಪ್ಪ, ಅರುಣಕುಮಾರ, ಸಂಜೀವ್, ಹರೀಶ್ ಅಕ್ಕಿ, ಸಿದ್ದೇಶ್, ರುದ್ರೇಶ್, ಮೊದಲಂಕಿಕುಮಾರ, ರವಿ, ಚನ್ನಪ್ಪ ಕಾಯಿ ಬುರುಡೆ ಇತರರು ಇದ್ದರು.


## ಭಾವಪೂರ್ಣ ಶ್ರದ್ಧಾಂಜಲಿ



ನಗರಸಭೆ ಮಾಜಿ ಸದಸ್ಯರು, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಧರ್ಮದರ್ಶಿಗಳು,
ಶ್ರೀ ಬೀರಲಿಂಗೇಶ್ವರ ಮೈದಾನ ಹೋರಾಟ ಸಮಿತಿಯ ಕಾರ್ಯದರ್ಶಿಗಳಾಗಿದ್ದ

**ಶ್ರೀ ಜೆ.ಕೆ. ಕೊಟ್ರಬಸಪ್ಪ**

ಇವರು ದಿನಾಂಕ : 24.02.2024ರ ಶನಿವಾರ ನಿಧನರಾಗಿದ್ದು,
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ
**ಸಪ್ತಗಿರಿ ವಿದ್ಯಾಲಯ,**
ದಾವಣಗೆರೆ



## ಯಲ್ಲಮ್ಮ ಸಾವಳಗಿ ನಿಧನ



ದಾವಣಗೆರೆ, ಯಲ್ಲಮ್ಮನಗರ, 4ನೇ ಮೇನ್, 7ನೇ ಕ್ರಾಸ್ ವಾಸಿ

**ಯಲ್ಲಮ್ಮ ಸಾವಳಗಿ**

ಇವರು ದಿನಾಂಕ 28.02.2024ರ ಬುಧವಾರ ಮಧ್ಯಾಹ್ನ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.02.2024ರ ಗುರುವಾರ ಬೆಳಿಗ್ಗೆ 11ಕ್ಕೆ ನಗರದ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 94820 48015, 91102 82125**



॥ ಶ್ರೀ ಕಣವಿ ಸಿದ್ದೇಶ್ವರ ಪ್ರಸನ್ನ ॥

## ಗುರು-ಲಿಂಗ ಜಂಗಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಎಂಸಿಸಿ ಎ ಬ್ಲಾಕ್ ವಾಸಿ
**ಶ್ರೀ ಲಿಂ॥ ಜ್ಯೋತಿರ್ಲಿಂಗಯ್ಯ** ಇವರ ಪತ್ನಿ
**ಶ್ರೀಮತಿ ಹೆಚ್.ಎಸ್. ಸುಶೀಲಮ್ಮ**
ಇವರು ಮಾಡುವ ವಿಜ್ಞಾಪನೆಗಳು.
ತಾ॥ 21.02.2024ನೇ ಬುಧವಾರ
ಬೆಳಿಗ್ಗೆ 6.45ಕ್ಕೆ ನಮ್ಮ ಪುತ್ರನಾದ

**ಶ್ರೀ ವೇದಮೂರ್ತಿಯವರು**
ಜಿಲ್ಲಾ ಪ್ರಧಾನ ಸಹ ಕಾರ್ಯದರ್ಶಿ
ಸರ್ವ ಜನಾಂಗ ಏಕತಾ ರಕ್ಷಣಾ ಸಮಿತಿ (ರಿ).

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಗುರು-ಲಿಂಗ-ಜಂಗಮಾರಾಧನೆ'ಯನ್ನು**

ದಿನಾಂಕ : 29.02.2024ನೇ ಗುರುವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ ಎಂಸಿಸಿ ಎ ಬ್ಲಾಕ್, 10ನೇ ಮೇನ್, 10ನೇ ಕ್ರಾಸ್, ಬಕ್ಕೇಶ್ವರ ಹೈಸ್ಕೂಲ್ ರೋಡ್, # 2476ರ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಧರ್ಮಪತ್ನಿ : **ಶ್ರೀಮತಿ ರೂಪಾ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 9900512132, 8095652279**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಶ್ರೀಮತಿ ಸುಶೀಲಮ್ಮ ನಿಧನ



ದಾವಣಗೆರೆ ಸಿಟಿ ಡಿಸಿಎಂ ಟೌನ್‌ಶಿಪ್ 'ಸಿ' ಬ್ಲಾಕ್ ವಾಸಿ, ದಿ॥ ಆರ್. ಬಸವರಾಜಪ್ಪ ಇವರ ಧರ್ಮಪತ್ನಿ ಶ್ರೀಮತಿ ಸುಶೀಲಮ್ಮ (78) ಇವರು ದಿನಾಂಕ 28.02.2024 ರಂದು ಬುಧವಾರ ಸಂಜೆ 4.40ಕ್ಕೆ ನಿಧನರಾದರು. ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.02.2024 ರಂದು ಗುರುವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪಾಕ್ ಪರ ಘೋಷಣೆ : ವಿಧಾನಸಭೆಯಲ್ಲಿ ಕೋಲಾಹಲ

ಬೆಂಗಳೂರು, ಫೆ. 28 - ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಜಿಂದಾಬಾದ್ ಘೋಷಣೆ ಕೂಗಿದ ವಿಷಯ ವಿಧಾನಸಭೆಯಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಯಿತು.

ವಿಧಾನಸಭೆ ಅಧಿವೇಶನ ಆರಂಭವಾಗುತ್ತಿದ್ದಂತೆ ಮಂಗಳವಾರದ ಘಟನೆ ಪ್ರಸ್ತಾಪಿಸಿದ ಪ್ರತಿಪಕ್ಷ ಬಿಜೆಪಿ, ಸರ್ಕಾರದ ರಾಜೀನಾಮೆಗೆ ಆಗ್ರಹಿಸಿದ್ದಲ್ಲದೆ, ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಬಂಧನಕ್ಕೆ ಒತ್ತಾಯಿಸಿತು.

ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮತ್ತಿತರರು, ರಾಜ್ಯಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ, ಚುನಾಯಿತ ಕಾಂಗ್ರೆಸ್ ಅಭ್ಯರ್ಥಿ ಸೈಯ್ಯದ್ ನಾಸಿರ್ ಹುಸೇನ್ ಅವರ ಸಂಭ್ರಮಾಚರಣೆ ಸಂದರ್ಭದಲ್ಲಿ ಪಾಕಿಸ್ತಾನ ಪರ ಘೋಷಣೆಯನ್ನು ಕಿಡಿಗೇಡಿಯೊಬ್ಬ ಕೂಗಿದ್ದಾನೆ.

ಕರ್ನಾಟಕದ ಇತಿಹಾಸದಲ್ಲೇ ಶಕ್ತಿಸೌಧದಲ್ಲಿ ಇಂತಹ ಘಟನೆ ನಡೆದಿರಲಿಲ್ಲ, ಇದು ಶಾಸನ ರಚನೆ ಸ್ಥಳ. ಇಂತಹ ಕೇಂದ್ರದಲ್ಲೇ ರಾಷ್ಟ್ರ ವಿರೋಧಿ ಚಟುವಟಿಕೆ ನಡೆದರೆ ಸರ್ಕಾರ ಯಾರಿಗೆ ರಕ್ಷಣೆ ನೀಡಲು ಸಾಧ್ಯ? ಎಂದು ಪ್ರಶ್ನಿಸಿದರು.

ಘಟನೆ ನಡೆದು 16 ಗಂಟೆಗಳಾದರೂ ಆರೋಪಿಯನ್ನು ಬಂಧಿಸದೇ ಸರ್ಕಾರ ರಕ್ಷಣೆ ಮಾಡುತ್ತಿದೆ. ಇಂತಹ ಸರ್ಕಾರ ನಮಗೆ ಬೇಕೇ? ಎಂದರು.

ರಾಷ್ಟ್ರ ವಿರೋಧಿಗಳನ್ನು ಬೆಂಬಲಿಸುವ ನೀವು ಅಧಿಕಾರದಿಂದ ಕೆಳಗಿಳಿದು ಹೊರ ನಡೆಯಿರಿ, ನಾಸಿರ್ ಹುಸೇನ್ ಅವರನ್ನು ಬಂಧಿಸಿದರೆ ಸತ್ಯ ಬಯಲಾಗುತ್ತದೆ. ರಾಷ್ಟ್ರದ ವಿರುದ್ಧ ಧ್ವನಿ ಎತ್ತುವವರಿಗೆ ನೀವು ರತ್ನಗಂಬಳಿ ಹಾಸುತ್ತಿದ್ದೀರಿ, ಇದು ನಿಮಗೆ ಮುಳುವಾಗುತ್ತದೆ ಎಂದರು.

ಕೆಎಫ್‌ಡಿ ಸಂಘಟನಾ ಸದಸ್ಯರು ನಿಮ್ಮ ಜೊತೆ ಇರುವಂತೆ ನಟಿಸುತ್ತಾರೆ, ಅವರು ಬಲಿಷ್ಠವಾದ ನಂತರ ನಿಮಗೇ ಚೂರಿ ಹಾಕಿ ನಿಮ್ಮ ಮೇಲೇ ಕೂರುತ್ತಾರೆ, ಅವರನ್ನು ನಂಬಬೇಡಿ ಎಂದೂ ಹೇಳಿದರು.

ಮೈಸೂರಿನ ನಿಮ್ಮ ಪಕ್ಷದ ಶಾಸಕ ತನ್ವೀರ್ ಸೇಠ್ ಪ್ರಕರಣ ನಮ್ಮ ಕಣ್ಣ ಮುಂದೆಯೇ ಇದೆ. ಹೀಗಿದ್ದೂ ನೀವು ಅವರ ರಕ್ಷಣೆಗೆ ನಿಂತಿರುವುದು ಎಷ್ಟು ಸಮಂಜಸ? ಎಂದು ಪ್ರಶ್ನಿಸಿದರು.

ಇದರ ನಡುವೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೀಡಿದ ಹೇಳಿಕೆ ಪ್ರತಿಪಕ್ಷದ ಸದಸ್ಯರಿಗೆ ತೃಪ್ತಿ ತರಲಿಲ್ಲ, ಸದನದಲ್ಲೇ ಇದ್ದ ಮುಖ್ಯಮಂತ್ರಿ ತುಟಿ ಪಿಟಿಕ್ ಎನ್ನಲಿಲ್ಲ.

ಇದು ಪ್ರತಿಪಕ್ಷದ ಸದಸ್ಯರನ್ನು ಮತ್ತಷ್ಟು ಕೆರಳಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆರೋಪಿಗಳ ಬಂಧನಕ್ಕೆ ಒತ್ತಾಯಿಸುವಂತೆ ಮಾಡಿತು.

ಸಭಾಧ್ಯಕ್ಷ ಯು.ಟಿ ಖಾದರ್, ಸದನವನ್ನು ಎರಡು ಬಾರಿ ಮುಂದೂಡಿ ತೆರೆಮರೆಯಲ್ಲಿ ಮಾತುಕತೆ ನಡೆಸಿದರೂ ಪ್ರಯೋಜನವಾಗಲಿಲ್ಲ. ನಂತರ ಸದನವನ್ನು ನಾಳೆಗೆ ಮುಂದೂಡಿದರು.

ಇದಕ್ಕೂ ಮುನ್ನ ಆರ್.ಅಶೋಕ್ ಮಾತನಾಡಿ, ಶಕ್ತಿಸೌಧದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಎನ್ನಲು ಸಾಧ್ಯವಾದರೆ, ರಾಜ್ಯದ ಬೇರೆ ಎಲ್ಲಿ ಕಾನೂನು ಸುವ್ಯವಸ್ಥೆಯನ್ನು ರಕ್ಷಿಸಲು ನಿಮ್ಮಿಂದ ಸಾಧ್ಯ? ಎಂದು ಪ್ರಶ್ನಿಸಿದರು.

ಇದು ದೇಶದ ಗೌರವದ ಪ್ರಶ್ನೆ, ಯಾವ ಕಾರಣಕ್ಕೂ ಇಂತಹ ಬೆಳವಣಿಗೆಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಕರಣ ನಡೆದು ಇಷ್ಟು ಸಮಯ ಕಳೆದರೂ ಒಬ್ಬನನ್ನೂ ಸರ್ಕಾರ ಬಂಧಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೀವು ಎಫ್‌ಎಸ್‌ಎಲ್ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಾಗಿ ಹೇಳುತ್ತೀರಿ. ವರದಿ ಬರುವುದು ಒಂದು ವಾರವೋ, ತಿಂಗಳೋ ಆಗಬಹುದು. ಅಲ್ಲಿಯವರೆಗೆ ಕಾಯಲು ಸಾಧ್ಯವಿಲ್ಲ. ಇದು ದೇಶದ್ರೋಹದ ಪ್ರಕರಣ, ತಕ್ಷಣವೇ ತಪ್ಪಿತಸ್ಥರನ್ನು ಬಂಧಿಸಬೇಕು. ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ಹಂತದಲ್ಲಿ ಆಡಳಿತ-ಪ್ರತಿಪಕ್ಷದ ಸದಸ್ಯರ ನಡುವೆ ಏರಿದ ಧ್ವನಿಯಲ್ಲಿ ವಾಗ್ಯುದ್ಧ ನಡೆಯಿತಲ್ಲದೆ, ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಸಭಾಧ್ಯಕ್ಷ ಯು.ಟಿ.ಖಾದರ್ ಸದನ ಕಲಾಪವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡಿ ಹೊರ ನಡೆದರು.

ತದ ನಂತರ ಸದನ ಸಲಹಾ ಸಮಿತಿಯ ಸಭೆ ನಡೆಸಿದ ಅವರು, ಪ್ರತಿಪಕ್ಷಗಳನ್ನು ಸಮಾಧಾನ ಪಡಿಸುವ ಯತ್ನ ನಡೆಸಿದರಾದರೂ ಅದು ಯಶಸ್ವಿಯಾಗಲಿಲ್ಲ. ಪುನಃ ಸದನ ಸೇರಿದಾಗ ಬಿಜೆಪಿ ಸದಸ್ಯರು ಏರಿದ ಧ್ವನಿಯಲ್ಲಿ ನಾಸಿರ್ ಹುಸೇನ್ ಅವರನ್ನು ಬಂಧಿಸುವಂತೆ ಆಗ್ರಹಿಸತೊಡಗಿದರು.

ಈ ಹಂತದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಸದನದಲ್ಲಿ ಕೆಲವು ಪ್ರಕಟಣೆಗಳನ್ನು ನೀಡತೊಡಗಿದಾಗ, ಸುಮ್ಮನಿರದ ಬಿಜೆಪಿ ಸದಸ್ಯರು ಒಂದೇ ಸಮನೆ ನಾಸಿರ್ ಹುಸೇನ್ ಅವರನ್ನು ಬಂಧಿಸುವಂತೆ ಒಕ್ಕೊರಲಿನಿಂದ ಕೂಗತೊಡಗಿದರು. ಬಿಜೆಪಿ ಸದಸ್ಯರ ಈ ಕೂಗಾಟ ಮುಂದುವರೆದು ಪರಿಸ್ಥಿತಿ ಪುನಃ ನಿಯಂತ್ರಣ ಕಳೆದುಕೊಂಡಾಗ ಸಭಾಧ್ಯಕ್ಷ ಯು.ಟಿ.ಖಾದರ್ ಸದನ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

# ಪರಿಶಿಷ್ಟರ ಕುಂದು - ಕೊರತೆ ಸಭೆ

## ಸಿ.ಜಿ. ಆಸ್ಪತ್ರೆಯಲ್ಲಿ ಪಾವತಿಯಾಗದ ವೇತನ

## ಹೊರಗುತ್ತಿಗೆ ಸಂಸ್ಥೆಯಿಂದ ದೌರ್ಜನ್ಯದ ಆರೋಪ



ದಾವಣಗೆರೆ, ಫೆ. 28 - ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಉದ್ಯೋಗಿಗಳಲ್ಲಿ ಪರಿಶಿಷ್ಟರೇ ಹೆಚ್ಚಾಗಿದ್ದಾರೆ. ಅವರಿಗೆ ಐದಾರು ತಿಂಗಳಿನಿಂದ ವೇತನವಾಗಿಲ್ಲ ಎಂಬ ಬಗ್ಗೆ ಎಸ್ಪಿ ಉಮಾ ಪ್ರಶಾಂತ್ ಅವರ ಬಳಿ ದೂರು ದಾಖಲಿಸಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಕುಂದು ಕೊರತೆಗಳ ಸಭೆಯಲ್ಲಿ ಮಾತನಾಡಿದ ದಲಿತ ಮುಖಂಡ ನೀಲಗಿರಿ, ಸಿ.ಜಿ. ಜಿಲ್ಲಾ ಆಸ್ಪತ್ರೆಯಲ್ಲಿ ರಾಯಚೂರಿನ ದೀಕ್ಷಾ ಖಾಸಗಿ ಸಂಸ್ಥೆಯ ಮೂಲಕ 200 ಉದ್ಯೋಗಿಗಳು ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಆರು ತಿಂಗಳಿನಿಂದ ವೇತನವಾಗಿಲ್ಲ ಎಂದರು.

ಅಲ್ಲದೇ, ಖಾಸಗಿ ಸಂಸ್ಥೆಯ ಮೂಲಕ ಬೆಳಿಗ್ಗೆ ಹಾಜರಿ ಪಡೆದುಕೊಳ್ಳುವವರು ರೌಡಿಗಳ ರೀತಿ ವರ್ತಿಸುತ್ತಿದ್ದಾರೆ. ಐದು ನಿಮಿಷ ತಡವಾದರೂ ವಾಪಸ್ ಮನೆಗೆ ಕಳಿಸುತ್ತಿದ್ದಾರೆ. ಈ ಬಗ್ಗೆ ವಿರೋಧಿಸಿದರೆ, ಕೆಲಸದಿಂದ ತೆಗೆದು ಹಾಕುತ್ತಿದ್ದಾರೆ. ಆ ಜಾಗಕ್ಕೆ ಬೇರೆಯವರನ್ನು 50-60 ಸಾವಿರ ರೂ. ಲಂಚ ಪಡೆದು ನೇಮಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿ.ಜಿ. ಆಸ್ಪತ್ರೆ ಉದ್ಯೋಗಿ ಕಮಲಮ್ಮ, 23 ವರ್ಷದಿಂದ ಕೆಲಸ ಮಾಡುತ್ತಿದ್ದೇವೆ. ಆದರೂ, ಸಮಸ್ಯೆ ಮಾಡುತ್ತಿದ್ದಾರೆ. ಐದು ನಿಮಿಷ ತಡವಾದರೂ ವಾಪಸ್ ಕಳಿಸುತ್ತಾರೆ. ಕಣ್ಣೀರಿಟ್ಟು ಮನೆಗೆ ಮರಳುವಂತಾಗಿದೆ ಎಂದರು.

ಈ ಬಗ್ಗೆ ಮಾತನಾಡಿದ ಎಸ್ಪಿ ಉಮಾ ಪ್ರಶಾಂತ್, ಲಿಖಿತ ದೂರು ಪಡೆದುಕೊಳ್ಳುತ್ತೇವೆ. ಖಾಸಗಿ ಸಂಸ್ಥೆಯ ತಪ್ಪಿದ್ದರೆ ಎಫ್.ಐ.ಆರ್. ದಾಖಲಿಸುತ್ತೇವೆ ಎಂದರು.

ನಿಂಗಪ್ಪ ಬನ್ನಿಹಟ್ಟಿ ಎಂಬುವವರು ಮಾತನಾಡಿ, ಹದಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪರಿಶಿಷ್ಟರ ಕುಂದು ಕೊರತೆ ಸಭೆ ಕರೆದಿಲ್ಲ. ದಲಿತ ಮುಖಂಡರು ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಮಾತನಾಡಲು ಠಾಣೆಗೆ ತೆರಳಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ ಎಂದು ದೂರಿದರು. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಎಸ್ಪಿ ಉಮಾ ಪ್ರಶಾಂತ್ ಹೇಳಿದರು.

ಹೆಗ್ಗೆರೆ ರಂಗಪ್ಪ ಮಾತನಾಡಿ, ಬೇಡ ಜಂಗಮರಲ್ಲದವರೂ ಸಹ ಇದೇ ಜಾತಿಯ ಹೆಸರಿನಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸುತ್ತಿದ್ದಾರೆ. ಶಾಲಾ ಹಂತದಲ್ಲಿಯೇ ನಕಲಿ ಜಾತಿ ದಾಖಲಾತಿಯ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಿಂದ ಪರಿಶಿಷ್ಟರ ಕುಂದು ಕೊರತೆ ಸಭೆ ಕರೆದಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕು ಎಂದು ಡಿ.ಎಸ್.ಎಸ್. ಮುಖಂಡ ದುಗ್ಗಪ್ಪ ಸೇರಿದಂತೆ ಹಲವರು ದೂರಿದರು. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆಯುವುದಾಗಿ ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.

ಪೌರ ಕಾರ್ಮಿಕರ ಕ್ವಾರ್ಟರ್ಸ್‌ಗೆ ಬಸ್ ಸೌಲಭ್ಯ ಕಲ್ಪಿಸುವಂತೆ ಉಚ್ಚಂಗೆಪ್ಪ ಒತ್ತಾಯಿಸಿದರು.

ಆದಿ ಜಾಂಬವ ಅಭಿವೃದ್ಧಿ ನಿಗಮ, ಎಸ್.ಟಿ. ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮಗಳ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿ ಎರಡು ಹಾಗೂ ಮೂರನೇ ಮಹಡಿಯಲ್ಲಿ ಇವೆ. ಇದರಿಂದಾಗಿ ವೃದ್ಧರಿಗೆ ಸಮಸ್ಯೆಯಾಗುತ್ತಿದೆ ಎಂದು ಸಭೆಯಲ್ಲಿ ದೂರಲಾಯಿತು.

ಸಭೆಯಲ್ಲಿ ಎ.ಎಸ್.ಪಿ. ವಿಜಯ ಕುಮಾರ್ ಸಂತೋಷ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜ್, ಆರ್.ಟಿ.ಒ. ಪ್ರಮುತೇಶ್ ಮತ್ತಿತರರು ಉಪಸ್ಥಿತರಿದ್ದರು.

### ಪತಿಯ ಸಾಲಕ್ಕೆ ವಿಧವಾ ಪತ್ನಿಗೆ ಪೀಡನೆ

ಫೈನಾನ್ಸ್ ಕಂಪನಿಗಳು ಸಾಲ ನೀಡುವಾಗ ಜೀವ ವಿಮೆ ಮಾಡಿಸಬೇಕಾಗುತ್ತದೆ. ಸಾಲ ಪಡೆದ ವ್ಯಕ್ತಿ ತೀರಿಕೊಂಡರೆ, ಆ ವಿಮೆಯಿಂದ ಹಣ ಪಡೆಯಬೇಕು. ಆದರೆ, ಕೆಲ ಫೈನಾನ್ಸ್ ಕಂಪನಿಗಳು ಈ ವಿಮಾ ಕಂತು ಪಾವತಿಸುತ್ತಿಲ್ಲ. ಗಂಡ ಮೃತಪಟ್ಟ ನಂತರ ಪತ್ನಿಯನ್ನು ಸಾಲಕ್ಕಾಗಿ ಪೀಡಿಸುತ್ತಿವೆ ಎಂದು ಸಂದೇಶ್ ನಾಯ್ಕ್ ಎಂಬುವವರು ದೂರಿದರು. ಗಂಡ ತೀರಿಕೊಂಡ ದುಃಖದಲ್ಲಿರುವ ಪತ್ನಿ ಜ್ಯೋತಿ ಎಂಬುವವರಿಗೆ ಪ್ರತಿದಿನ ಮನೆಗೆ ಬಂದು ಸಾಲ ಮರು ಪಾವತಿಗೆ ಕಾಡುತ್ತಿದ್ದಾರೆ ಎಂದರು. ಇದೇ ರೀತಿಯ ಇನ್ನೂ ಎರಡು ಪ್ರಕರಣಗಳಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ಹೇಳಿದರು.

### ಅಂಬೇಡ್ಕರ್ ಭವನಕ್ಕಾಗಿ ಆಗ್ರಹ

ನಗರದ ಪ್ರಮುಖ ಭಾಗದಲ್ಲೇ ಅಂಬೇಡ್ಕರ್ ಭವನ ನಿರ್ಮಿಸಬೇಕು ಎಂದು ಸಭೆಯಲ್ಲಿ ಹಲ ವಾರು ದಲಿತ ಮುಖಂಡರು ಒತ್ತಾಯಿಸಿದರು. ಅಗ್ನಿಶಾಮಕ ದಳ ಹಾಗೂ ಹೆದ್ದಾರಿಯ ಐ.ಬಿ. ಬಳಿ ಎರಡು ಜಾಗಗಳನ್ನು ಗುರುತಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜ್ ಹೇಳಿದರು. ಇದಕ್ಕೆ ಒಪ್ಪದ ಮುಖಂಡರು, ನಗರದ ಹೊರ ವಲಯದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಿದರೆ ನಿರ್ವಹಣೆ ಕಷ್ಟವಾಗುತ್ತದೆ. ನಗರದ ಪ್ರಮುಖ ಭಾಗದಲ್ಲೇ ಭವನ ನಿರ್ಮಿಸಬೇಕು. ಇಲ್ಲವಾದರೆ ಹೋರಾಟಕ್ಕೆ ಮುಂದಾಗುವುದಾಗಿ ಎಚ್ಚರಿಸಿದರು.



# ದೇವರಬೆಳಕೆರೆ ಪಿಕಪ್ ಡ್ಯಾಂನಿಂದ ಬ್ಯಾಲದಹಳ್ಳಿ ಹಳ್ಳಕ್ಕೆ ನೀರು ಹರಿಸಿ

## ಜಿಲ್ಲಾಧಿಕಾರಿಗಳಿಗೆ ತೋಟಗಳ ರೈತರ ಮನವಿ

ಮಲೇಬೆನ್ನೂರು, ಫೆ.28- ದೇವರಬೆಳಕೆರೆ ಪಿಕಪ್ ಡ್ಯಾಂನಿಂದ ಬ್ಯಾಲದಹಳ್ಳಿ ಹಳ್ಳಕ್ಕೆ ನೀರು ಹರಿಸುವಂತೆ ಒತ್ತಾಯಿಸಿ, ದೇವರಬೆಳಕೆರೆ, ಕುಣೆಬೆಳಕೆರೆ, ಕಡ್ಲೆಗೊಂದಿ, ಸಲಗನಹಳ್ಳಿ, ಹನಗವಾಡಿ, ಹರಗನಹಳ್ಳಿ, ರಾಮತೀರ್ಥ ಗ್ರಾಮಗಳ ನೂರಾರು ರೈತರು ಬುಧವಾರ ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಬ್ಯಾಲದಹಳ್ಳಿ ಹಳ್ಳ ನೀರಿಲ್ಲದೇ ಬತ್ತಿ ಬರಿದಾಗಿದ್ದು, ಹತ್ತಾರು ಹಳ್ಳಿಗಳ ಸಾವಿರಾರು ತೋಟಗಳಿಗೆ ತೊಂದರೆ ಆಗಿದೆ. ಆದ್ದರಿಂದ ತಕ್ಷಣ ದೇವರಬೆಳಕೆರೆ ಪಿಕಪ್ ಡ್ಯಾಂನ ಸ್ಕವರಿಂಗ್ ಸ್ಲೂಯಿಸ್ ಗೇಟ್ ಮೂಲಕ ಹಳ್ಳಕ್ಕೆ ನೀರು ಹರಿಸುವಂತೆ ರೈತರು ಜಿಲ್ಲಾಧಿಕಾರಿಗಳು ತಿಳಿಸಿದರು.

ರೈತರ ಮನವಿಗೆ ಪೂರಕ ಸ್ಪಂದಿಸಿದ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಅವರು, ಭದ್ರಾ ಇಂಜಿನಿಯರ್‌ಗಳ ಜೊತೆ ಚರ್ಚಿಸಿ ನೀರು ಹರಿಸುವ ಭರವಸೆ ನೀಡಿದರು. ಭದ್ರಾ ಅಚ್ಚುಕಟ್ಟಿನ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ, ಕಡ್ಲೆಗೊಂದಿಯ ಎ.ಹನುಮಂತರೆಡ್ಡಿ, ರಾಮಚಂದ್ರಪ್ಪ, ಬೀರಪ್ಪ, ಕುಣೆಬೆಳಕೆರೆ ಗ್ರಾ.ಪಂ. ಅಧ್ಯಕ್ಷ ನಾಗರಾಜ್, ಮಡಿವಾಳರ ಮಲ್ಲೇಶಪ್ಪ, ಅಂಜಿನಪ್ಪ, ಕರಿಬಸಪ್ಪ, ಹರೀಶ್, ಬೀರಪ್ಪ, ಕೆ.ಬೇವಿನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಸಲಗನಹಳ್ಳಿ ಮಂಜಪ್ಪ, ಹರಗನಹಳ್ಳಿಯ ಮಂಜುನಾಥ್, ವಿಶ್ವನಾಥ್ ಸೇರಿದಂತೆ ಇನ್ನೂ ಅನೇಕ ರೈತರು ಈ ವೇಳೆ ಹಾಜರಿದ್ದರು.

# ಘಂಟ್ಯಾಪುರದಲ್ಲಿ ವೀರಭದ್ರಸ್ವಾಮಿ ಕೆಂಡದಾರ್ಚನೆ, ಪಲ್ಲಕ್ಕಿ ಮಹೋತ್ಸವ



ಹೊನ್ನಾಳಿ, ಫೆ. 28- ತಾಲ್ಲೂಕಿನ ಘಂಟಾಪುರ ಗ್ರಾಮದ ಶ್ರೀ ವೀರಭದ್ರಸ್ವಾಮಿ ಕೆಂಡದಾರ್ಚನೆ, ಪಲ್ಲಕ್ಕಿ ಮಹೋತ್ಸವ ಮಂಗಳವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಇಂದು ನೆರವೇರಿತು.

ನ್ಯಾಮತಿ ಪಟ್ಟಣ ಮತ್ತು ಕುಂಕುವ ಗ್ರಾಮದ ಪುರವಂತರಿಂದ ಖಡ್ಗ ಪ್ರದರ್ಶನದೊಂದಿಗೆ ವೀರಗಾಸೆ ನೃತ್ಯ ಪ್ರದರ್ಶನ ನಡೆಯಿತು.

ಪುರುವಂತರು ಕಲಾವಿದರ ಸಮಾಳ ವಾದನಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ವೀರಗಾಸೆ ನೃತ್ಯ ಮಾಡುತ್ತಿದ್ದ ದೃಶ್ಯ ಮನಮೋಹಕವಾಗಿತ್ತು. ವೀರಭದ್ರ ಸ್ವಾಮಿಯ ಅವತಾರ ನಿರೂಪಿಸುವ ಹಾಗೂ ದಕ್ಷ ಬ್ರಹ್ಮನ ಪೌರಾಣಿಕ ಕತೆಗಳನ್ನು ಪುರವಂತರು ಹೇಳುತ್ತಾ ನರ್ತನ ಮಾಡಿದರು. ನಂತರ ಪುರುವಂತರು ಬಾಳೆಗಿಡವನ್ನು ಕತ್ತರಿಸಿದರು.

ಹರಕೆ ಹೊತ್ತ ಮಹಿಳೆಯರು, ಪುರುಷರು ಪುರುವಂತರಿಂದ ಶಸ್ತ್ರಗಳನ್ನು ಬಾಯಿಗೆ ಹಾಗೂ ದೇಹದ ಇತರೆ ಭಾಗಗಳಿಗೆ ಹಾಕಿಸಿಕೊಳ್ಳುತ್ತಿದ್ದ ದೃಶ್ಯ ರೋಮಾಂಚನಕಾರಿಯಾಗಿತ್ತು.

ವಿವಿಧ ದೇವರುಗಳ ಉತ್ಸವ ಮೂರ್ತಿಗಳು ಪಲ್ಲಕ್ಕಿಯಲ್ಲಿ ಪ್ರದಕ್ಷಿಣೆ ಹಾಕಿದ ನಂತರ ಕೆಂಡದಾರ್ಚನೆ ನಡೆಯಿತು. ದೇವರ ಉತ್ಸವ ಮೂರ್ತಿ ಇದ್ದ ಪಲ್ಲಕ್ಕಿಯನ್ನು ಹೊತ್ತ ಭಕ್ತರು, ಅರ್ಚಕರು ಕೆಂಡ ಹಾಯ್ದರು. ಬಳಿಕ ನೂರಾರು ಭಕ್ತರು ಕೆಂಡ ಹಾಯ್ದರು. ನಂತರ ಮಹಾ ಪ್ರಸಾದ ನಡೆಯಿತು. ಅಪಾರ ಸಂಖ್ಯೆಯ ಭಕ್ತರು ಶ್ರೀ ವೀರಭದ್ರಸ್ವಾಮಿ ಕೆಂಡದರ್ಚನೆ ಮಹೋತ್ಸವದಲ್ಲಿ ಪಾಲ್ಗೊಂಡರು. ಜಿ.ಪಂ.ಮಾಜಿ ಉಪಾಧ್ಯಕ್ಷ ಸಿ. ಸುರೇಂದ್ರನಾಯ್ಕ, ತಾಂಡಾ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಮಾರುತಿನಾಯ್ಕ ಮತ್ತು ಇತರರು ಉಪಸ್ಥಿತರಿದ್ದರು.

# ವಾಲ್ಟ್ ಡಿಸ್ನಿ, ರಿಲೈಯನ್ಸ್‌ನಿಂದ ಜಂಟಿ ಉದ್ಯಮ

ನವದೆಹಲಿ, ಫೆ. 28 – ವಾಲ್ಟ್ ಡಿಸ್ನಿ ಕಂಪನಿ ಹಾಗೂ ರಿಲೈಯನ್ಸ್ ಇಂಡಸ್ಟ್ರೀಸ್‌ಗಳು ಭಾರತದಲ್ಲಿ ತಮ್ಮ ಮಾಧ್ಯಮ ಕಾರ್ಯನಿರ್ವಹಣೆ ವಿಭಾಗಗಳನ್ನು ವಿಲೀನಗೊಳಿಸಲು ಸಮ್ಮತಿಸಿವೆ. ಇದರಿಂದ 70 ಸಾವಿರ ಕೋಟಿ ರೂ.ಗಳ ಬೃಹತ್ ಸಂಸ್ಥೆ ರೂಪುಗೊಳ್ಳಲಿದೆ. ಪ್ರಸ್ತಾಪಿತ ಕಂಪನಿಯಲ್ಲಿ ರಿಲೈಯನ್ಸ್ ಹಾಗೂ ಅಧೀನ ಸಂಸ್ಥೆಗಳು ಶೇ.63.16ರ ಪಾಲುಗಾರಿಕೆ ಹೊಂದಿರಲಿವೆ. ಇದರಲ್ಲಿ ಎರಡು ಪ್ರಸಾರ ಸೇವೆ ಹಾಗೂ 120 ಟಿ.ವಿ. ಚಾನಲ್‌ಗಳು ಇರಲಿವೆ. ಡಿಸ್ನಿ ಉಳಿದ ಶೇ.36.84ರ ಪಾಲುಗಾರಿಕೆ ಹೊಂದಲಿದೆ. ಜಂಟಿ ಉದ್ಯಮದಲ್ಲಿ 11,500 ಕೋಟಿ ರೂ.ಗಳ ಹೂಡಿಕೆ ಮಾಡಲು ರಿಲೈಯನ್ಸ್ ಸಮ್ಮತಿಸಿದೆ.

# ಜ್ಞಾನವಾಪಿ : ನೆಲಮಾಳಿಗೆ ತಾರಸಿ ದುರಸ್ತಿಗಾಗಿ ಅರ್ಜಿ

ವಾರಣಾಸಿ, ಫೆ. 28 – ಜ್ಞಾನವಾಪಿ ಸಂಕೀರ್ಣದ ದಕ್ಷಿಣ ನೆಲಮಾಳಿಗೆ ಮೇಲೆ ಮುಸ್ಲಿಂ ಭಕ್ತಾದಿಗಳು ನಡೆಯದಂತೆ ನಿರ್ಬಂಧಿಸಬೇಕು ಎಂದು ವಾರಣಾಸಿ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ದಾಖಲಿ ಸಲಾಗಿದೆ. ದಕ್ಷಿಣ ನೆಲಮಾಳಿಗೆಯ ಲ್ಲಿರುವ ಹಿಂದೂ ದೇವರ ಪೂಜೆಗೆ ಜಿಲ್ಲಾ ನ್ಯಾಯಾಲಯ ಈ ಹಿಂದೆ ಅನುಮತಿ ನೀಡಿತ್ತು. ಹಿಂದೂ ಭಕ್ತಾದಿಗಳು ಈ ಬಗ್ಗೆ ಅರ್ಜಿ ದಾಖಲಿಸಿದ್ದು, ನೆಲಮಾಳಿಗೆಯ ತಾರಸಿ ಹಳೆಯದು ಹಾಗೂ ದುರ್ಬಲವಾಗಿದೆ. ಅದರ ಕೆಳಗಿನ ವ್ಯಾಸ ನೆಲಮಾಳಿಗೆಗೆ ರಿಪೇರಿಯ ಅಗತ್ಯವಿದೆ ಎಂದು ಹೇಳಿದ್ದಾರೆ.

ನ್ಯಾಯಾಲಯ ಈ ಕುರಿತ ಅರ್ಜಿಯ ವಿಚಾರಣೆಯನ್ನು ಮಾರ್ಚ್ 19ಕ್ಕೆ ನಿಗದಿ ಪಡಿಸಿದೆ. ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ನೀಡಲಾಗಿದ್ದ ಅನುಮತಿ ಯನ್ನು ಪ್ರಶ್ನಿಸಿ ಮುಸ್ಲಿಂ ಕಕ್ಷಿದಾರರ ಪರವಾಗಿ ದಾಖಲಿಸಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ತಳ್ಳಿ ಹಾಕಿತ್ತು.

# ಚೇತನ ಒಲಂಪಿಯಾಡ್ ಶಾಲೆಯಲ್ಲಿ ವಿಜ್ಞಾನ ಪ್ರದರ್ಶನ




ದಾವಣಗೆರೆ, ಫೆ. 28- ಚೇತನ ಒಲಂಪಿಯಾಡ್ ಶಾಲೆಯಲ್ಲಿ ವಿಜ್ಞಾನ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ವಿಶ್ವಚೇತನ ವಿದ್ಯಾನಿಕೇತನ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ವಿಜಯಲಕ್ಷ್ಮಿ ವೀರ ಮಾಚಿನೇನಿ, ದಾವಣಗೆರೆಯ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ದಾವಣಗೆಯ ಜೆಜೆಎಂ ಮೆಡಿಕಲ್ ಕಾಲೇಜಿನ ಶಿಶುವೈದ್ಯ ವಿಭಾಗದ ಸಹ ಪ್ರಾಧ್ಯಾಪಕರಾದ ಶ್ರೀಮತಿ ಎಸ್.ಎಂ. ಸ್ಫೂರ್ತಿ, ವಿದ್ಯಾಚೇತನ ಪಿ ಯು ಕಾಲೇಜಿನ ಪ್ರಾಂಶುಪಾಲ ಪ್ರದೀಪ್ ಉಪಸ್ಥಿತರಿದ್ದರು.

# ಮೂರನೇ ಬಾರಿ ವಿಧಾನ ಮಂಡಲದ ಅವಧಿ ವಿಸ್ತರಣೆ

ಬೆಂಗಳೂರು, ಫೆ. 28 - ವಿಧಾನಮಂಡಲದ ಅಧಿವೇಶನವನ್ನು ಮತ್ತೆ ಒಂದು ದಿನಕ್ಕೆ ವಿಸ್ತರಣೆ ಮಾಡಲಾಗಿದೆ. ಇತ್ತೀಚಿನ ವರ್ಷಗಳಲ್ಲೇ ಅಧಿವೇಶನವನ್ನು ಮೂರು ಬಾರಿ ವಿಸ್ತರಣೆ ಮಾಡಿರುವುದು ಇದೇ ಮೊದಲಾಗಿದೆ.

ಫೆಬ್ರವರಿ 23ರ ಶುಕ್ರವಾರದಂದೇ ಅಧಿವೇಶನ ಮುಗಿಯಬೇಕಿತ್ತು, ಅಂದು ಮುಖ್ಯಮಂತ್ರಿ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲು ಸಾಧ್ಯವಾಗದ ಕಾರಣ ಫೆಬ್ರವರಿ 26 ರ ಸೋಮವಾರಕ್ಕೆ ವಿಸ್ತರಣೆ ಮಾಡಲಾಯಿತು.

ಆಡಳಿತ ಪಕ್ಷದ ಹಾಲಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರ ಹಠಾತ್ ನಿಧನದಿಂದ ಅಂದು ಕಲಾಪವನ್ನು ಮೊಟಕುಗೊಳಿಸಿ, ಸದನವನ್ನು ಬುಧವಾರಕ್ಕೆ ಮುಂದೂಡಲಾಗಿತ್ತು. ಇಂದು ಮುಖ್ಯಮಂತ್ರಿ ಉತ್ತರ ನೀಡಿ ಬಜೆಟ್‌ಗೆ ಅನುಮತಿ ಪಡೆಯಬೇಕಿತ್ತು. ಆದರೆ, ರಾಜ್ಯಸಭಾ ಚುನಾವಣಾ ಫಲಿತಾಂಶದ ವೇಳೆ ಪಾಕಿಸ್ತಾನ ಪರ ಚುನಾವಣೆ ಘೋಷಣೆ ಕೂಗಿದ ವಿಷಯ ವಿಧಾನಮಂಡಲದಲ್ಲಿ ಪ್ರತಿಧ್ವನಿಸಿ ಭಾರೀ ಕೋಲಾಹಲ ಉಂಟು ಮಾಡಿದ್ದರಿಂದ ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಉತ್ತರ ನೀಡಲು ಸಾಧ್ಯವಾಗಲಿಲ್ಲ.

ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಅವರು ತಮ್ಮ ಉತ್ತರದಲ್ಲಿ ಗ್ಯಾರಂಟಿ ಯೋಜನೆ, ಕೇಂದ್ರದ ಮಲತಾಯಿ ಧೋರಣೆ ಹಾಗು ಕೆಲವು ಯೋಜನೆಗಳನ್ನು ಪ್ರಕಟಿಸುವ ಉದ್ದೇಶ ಹೊಂದಿದ್ದಾರೆ.

ಇದಕ್ಕಾಗಿ ಅವರಿಗೆ ಒಂದಷ್ಟು ಸಮಯಾವಕಾಶ ಬೇಕಿದೆ. ಅದು ಇಂದು ದೊರೆಯದ ಕಾರಣ ಸಭಾಧ್ಯಕ್ಷರಲ್ಲಿ ಮನವಿ ಮಾಡಿ ನಾಳೆ ಉತ್ತರ ನೀಡುವುದಾಗಿ ಮನವಿ ಮಾಡಿದರು.

# ಪ್ರೇಮ ವಿವಾಹದಿಂದ ಸಂಘರ್ಷ : ಸಾವು

ಮುಜಾಫರನಗರ, ಫೆ. 28 - ಪ್ರೇಮ ವಿವಾಹಕ್ಕೆ ಸಂಬಂಧಿಸಿದ ವಿವಾದ ಸಂಘರ್ಷಕ್ಕೆ ತಿರುಗಿ ಮೂವರು ಸಾವನ್ನಪ್ಪಿದ ಘಟನೆ ಉತ್ತರಪ್ರದೇಶದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಜಾಫರನಗರ ಜಿಲ್ಲೆಯ ಫುಲಟ್ ಹಳ್ಳಿಯಲ್ಲಿ ಒಂದೇ ಜಾತಿಗೆ ಸೇರಿದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ. ಘರ್ಷಣೆಯಲ್ಲಿ ಅಂಕಿತ್ (25) ಹಾಗೂ ರೋಹಿತ್ (29) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಹುಲ್ (27) ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಹರಿಮೋಹನ್ (48) ತೀವ್ರವಾಗಿ ಗಾಯಗೊಂಡಿದ್ದಾರೆ.

ಅಂಕಿತ್ ಅವರು ಹರಿಮೋಹನ್ ಮಗಳನ್ನು ಮದುವೆಯಾಗಿದ್ದರು. ಈ ಮದುವೆಗೆ ಹರಿಮೋಹನ್ ಕುಟುಂಬದ ವಿರೋಧವಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಅಂಕಿತ್ ಹಾಗೂ ಹರಿಮೋಹನ್ ನಡುವೆ ಚಕಮಕಿ ನಡೆದಿತ್ತು. ಈ ಚಕಮಕಿ ಹಿಂಸಾ ಸ್ವರೂಪಕ್ಕೆ ತಿರುಗಿ ಬಂದೂಕುಗಳನ್ನು ಬಳಸಲಾಯಿತು ಎಂದು ಪೊಲೀಸರು ಹೇಳಿದ್ದಾರೆ. ಈ ಬಗ್ಗೆ ರಾಜು, ಮೋನು ಹಾಗೂ ಗೋವರ್ಧನ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.


**ಬೇಕಾಗಿದ್ದಾರೆ**

ಫ್ರೆಂಟ್ ಆಫೀಸ್ (ಸೇಲ್ಸ್) ಕೆಲಸಕ್ಕೆ

ಪಿಯುಸಿ/ಡಿಗ್ರಿ ಆದ ಮಹಿಳೆಯರು ಬೇಕಾಗಿದ್ದಾರೆ.

ಅರ್ಹತೆ : ● Basic Computers (Email Access)

● English Typing & Communication

Walkin Interview : 01-03-2024 Friday at 11-00 am to 02-00 pm

ಮಧುವನ ಟೂರ್ಸ್, ಜಯದೇವ ಸರ್ಕಲ್, ದಾವಣಗೆರೆ ಮೊ : 9980078654



Form-IV

**STATEMENT OF OWNERSHIP**

Other Particulars about Newspaper

**JANATHAVANI**

1. Place of Publication : Davanagere.
2. Periodicity of Publication : Daily
3. Printers Name : Jayadhara Offset Printers
   Nationality : Indian
   Address : 605, 'Jayadhara' : Hadadi Road : Davanagere-577005. : Karnataka
4. Publishers Name : Vikas Shadaksharappa Mellekatte
   Nationality : Indian
   Address : 605, 'Jayadhara', : Hadadi Road, : Davanagere-577005. : Karnataka
5. Editors Name : Vikas Shadaksharappa Mellekatte
   Nationality : Indian
   Address : No. 967, Jayadhara Taralabalu Extension, Davanagere-577005.
6. Name and address of individuals who own the newspaper or partners of shareholders holding more than one percent of the total capital. : Vikas Shadaksharappa Mellekatte No. 967, Jayadhara Taralabalu Extension Davanagere-577005.

I, Vikas Shadaksharappa Mellekatte hereby declare that the Particulars given above are true to the best of our knowledge and belief.

Sd/-

**Vikas Shadaksharappa Mellekatte**
Publisher.

**Davanagere.**
**Date : 29.02.2024**


# ದೇಶ ದ್ರೋಹಿಗಳಿಗೆ ರಕ್ಷಣೆಯ ಪ್ರಶ್ನೆಯೇ ಇಲ್ಲ : ಪರಮೇಶ್ವರ್

ಬೆಂಗಳೂರು, ಫೆ. 28 - ದೇಶ ದ್ರೋಹಿಗಳಿಗೆ ರಕ್ಷಣೆ ಕೊಡುವ ಪ್ರಶ್ನೆಯೇ ಇಲ್ಲ ಎಂದಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಅಂತಹವರ ವಿರುದ್ಧ ರಾಷ್ಟ್ರ ವಿರೋಧಿ ಚಟುವಟಿಕೆ ನಿಗ್ರಹ ಕಾನೂನಿನಡಿ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನಸಭೆಯಲ್ಲಿಂದು ಭರವಸೆ ನೀಡಿದರು.

ರಾಜ್ಯದಲ್ಲಿ ಯಾವುದೇ ಮೂಲೆಯಲ್ಲಿ ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿ, ನಮಗೆ ಅವಮಾನ ಮಾಡಿದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ರಾಜ್ಯಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ನಿನ್ನೆ ಸಂಭ್ರಮಾಚರಣೆ ವೇಳೆ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಾರೆ ಎಂದು ಆರೋಪಿಸಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬಿಜೆಪಿಯ ಹಲವು ಶಾಸಕರು ಆರೋಪ ಮಾಡಿದರು. ಈ ಬಗ್ಗೆ ನಡೆಸಿದ ಚರ್ಚೆಗೆ ಉತ್ತರ ನೀಡಿದ ಗೃಹ ಸಚಿವರು, ರಾಷ್ಟ್ರ ವಿರೋಧಿಗಳಿಗೆ ನಮ್ಮಲ್ಲಿ ರಕ್ಷಣೆ ಇಲ್ಲ ಎಂದರು.

ನಿನ್ನೆ ಸಂಜೆ ಆ ಘಟನೆ ಆಗಬಾರದಿತ್ತು, ಆಗಿದೆ. ಮಾಧ್ಯಮದಲ್ಲಿ ಎರಡು ರೀತಿಯ ಅಭಿಪ್ರಾಯ ವ್ಯಕ್ತವಾಗಿದೆ. ಆ ರೀತಿ ಘೋಷಣೆ ಕೂಗಿದ್ದಾರೆ ಎಂದು ಕೆಲವರು ಅಭಿಪ್ರಾಯಿಸಿದರೆ, ಮತ್ತೆ ಕೆಲವರು ಆ ರೀತಿ ಘೋಷಣೆ ಕೂಗಿಲ್ಲ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ಈ ಕಾರಣಕ್ಕಾಗಿಯೇ ಎಫ್.ಎಸ್.ಎಲ್. (ವಿಧಿ ವಿಜ್ಞಾನ ಪರೀಕ್ಷೆ) ವರದಿಗೆ ಕಾಯಲಾಗುತ್ತಿದೆ, ನಂತರ ಪರಿಶೀಲಿಸಿ ಕ್ರಮ ಜರುಗಿಸುವುದಾಗಿ ತಿಳಿಸಿದರು.

ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಜಯ್ ಮಾಕೆನ್, ಸೈಯ್ಯದ್ ನಾಸೀರ್ ಹುಸೇನ್, ಜಿ.ಸಿ.ಚಂದ್ರಶೇಖರ್, ನಾರಾಯಣಾ ಸಾ ಭಾಂಡಗೆ ಚುನಾಯಿತರಾಗಿದ್ದಾರೆ. ಆ ಸಂದರ್ಭದಲ್ಲಿ ಅವರ ಅಭಿಮಾನಿಗಳು ಸಂಭ್ರಮಿಸಿದ್ದಾರೆ. ಸಂಭ್ರಮಾಚರಣೆಗೆ ಒಳಗೆ ಅವಕಾಶ ನೀಡಬಾರದಿತ್ತು. ಬಿಟ್ಟಿದ್ದು ತಪ್ಪು ಎಂದರು.

ಸೈಯ್ಯದ್ ನಾಸೀರ್ ಹುಸೇನ್ ಅವರು ವಿಧಾನಸೌಧಕ್ಕೆ ಬರಲು 25 ಜನರಿಗೆ ಅನುಮತಿ ಪಡೆದಿದ್ದರು. ವಿಜಯೋತ್ಸವ ಸಂದರ್ಭದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿರುವುದಾಗಿ ಆರೋಪ ಮಾಡಲಾಗಿದೆ.

ಅದರ ಸತ್ಯಾಸತ್ಯತೆಯನ್ನು ವೈಜ್ಞಾನಿಕವಾಗಿ ತಿಳಿಯಲು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಕೇಳಲಾಗಿದೆ. ವರದಿ ಬಂದ ತಕ್ಷಣ ಒಂದು ಕ್ಷಣವೂ ತಡ ಮಾಡದೇ ಕಾನೂನು ರೀತಿ ಕ್ರಮ ಜರುಗಿಸುತ್ತೇವೆ, ಯಾರನ್ನೂ ರಕ್ಷಣೆ ಮಾಡುವುದಿಲ್ಲ ಎಂದು ಹೇಳಿದರು.

ನಿನ್ನೆ ಸಂಜೆ ಆರೋಪ ಕೇಳಿಬಂದ ಕೂಡಲೇ ಸ್ವಯಂಪ್ರೇರಿತವಾಗಿ ಐಎಫ್‌ಐಆರ್ ದಾಖಲಿಸ ಲಾಗಿದೆ. ಬಿಜೆಪಿಯವರು ಈ ಸಂಬಂಧ ನೀಡಿರುವ ದೂರನ್ನೂ ದಾಖಲಿಸ ಲಾಗಿದೆ. ತನಿಖೆ ನಡೆಯುತ್ತಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳುತ್ತೇವೆ ಎಂದರು.

### ಎಫ್.ಎಸ್.ಎಲ್. ವರದಿ ನಂತರ ಕ್ರಮ

# ಶಾಂತಿಸಾಗರದಲ್ಲಿ 20 ದಿನಗಳಿಗೆ ನೀರಿನ ಸಂಗ್ರಹ

**(1ನೇ ಪುಟದಿಂದ)** ನೀರು ಕಡಿಮೆಯಾಗಿವೆ ಎಂದು ಪರಿಶೀಲನೆ ನಡೆಸಿ ಆಳಕ್ಕೆ ಕೊರೆಯಬೇಕಾಗಿದ್ದಲ್ಲಿ ಅಂತಹ ಕೊಳವೆಬಾವಿಗಳ ವಿವರದೊಂದಿಗೆ ಪ್ರಸ್ತಾವನೆಯನ್ನು ಆಯಾ ತಾಲ್ಲೂಕು ತಹಶೀಲ್ದಾರರಿಗೆ ಸಲ್ಲಿಸಬೇಕು ಎಂದರು.

ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ತಕ್ಷಣವೇ ಸಹಾಯವಾಣಿ ಆರಂಭಿಸಬೇಕು. ಜನರು ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆಯಾದಲ್ಲಿ ಮತ್ತು ಇತರೆ ಸಮಸ್ಯೆಗಳಿದ್ದಲ್ಲಿ ಸಹಾಯವಾಣಿಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳುವರು.

ಜಿಲ್ಲೆಯ 14 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 22 ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಮಸ್ಯೆಯಾಗಬಹುದಾದ 169 ಗ್ರಾಮಗಳನ್ನು ಗುರುತಿಸಲಾಗಿದೆ. ಇದಕ್ಕಾಗಿ 171 ಕಡೆ ಖಾಸಗಿ ಬೋರ್‌ವೆಲ್ ಗುರುತಿಸಿ 89 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಬರಗಾಲ ಎದುರಿಸಲು ತುರ್ತು ಕೆಲಸಗಳಿಗಾಗಿ ಅಂದರೆ ಕುಡಿಯುವ ನೀರು, ಮೇವು ಪೂರೈಕೆಗಾಗಿ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ರೂ.16.10 ಕೋಟಿ, ಮತ್ತು ಎಲ್ಲಾ ತಹಶೀಲ್ದಾರರ ಖಾತೆಯಲ್ಲಿ ರೂ.2.67 ಕೋಟಿ ಸೇರಿ, ಒಟ್ಟು 18.77 ಕೋಟಿ ರೂ. ಹಣವಿದ್ದು ಯಾವುದೇ ಅನುದಾನದ ಕೊರತೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ವೀಡಿಯೋ ಕಾನ್ಫರೆನ್ಸ್‌ನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್, ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರೀನ್ ಭಾನು ಎಸ್. ಬಳ್ಳಾರಿ, ಉಪವಿಭಾಗಾಧಿಕಾರಿ ಅಭಿಷೇಕ್, ದುರ್ಗಶ್ರೀ, ಡಿಡಿಎಲ್‌ಆರ್ ಭಾವನಾ ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

## ಪಂಚಾಕ್ಷರಯ್ಯ ನವರಿಗೆ ಡಾಕ್ಟರೇಟ್




ಹರಪನಹಳ್ಳಿ, ಫೆ. 28 - ತಾಲ್ಲೂಕಿನ ನಂದಿ ಬೇವೂರು ಗ್ರಾಮದ ಕೃಷಿ, ಜ್ಯೋತಿಷ್ಯ, ಪಾರಂಪರಿಕ ವೈದ್ಯ ಸಾಧಕ ಹಾಗೂ ರಂಗ ಕಲಾವಿದ ವೈದ್ಯ ಸಿ.ಎಂ. ಪಂಚಾಕ್ಷರಯ್ಯ ನವರಿಗೆ ಗೌರವ ಡಾಕ್ಟರೇಟ್ ಲಭಿಸಿದೆ. ಫೆ. 25 ರಂದು ತಮಿಳುನಾಡಿನ ಹೊಸೂರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿ.ಎಂ. ಪಂಚಾಕ್ಷರಯ್ಯ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. ತಮಿಳುನಾಡಿನ ಏಷ್ಯಾ ಇಂಟರ್ ನ್ಯಾಷನಲ್ ಕಲ್ಚರ್ ರಿಸರ್ಚ್ ಅಕಾಡೆಮಿಯು ಈ ಗೌರವ ನೀಡಿದೆ.

## ಅಧ್ಯಕ್ಷರಾಗಿ ಬಿ.ಸಿ. ಉಮಾಪತಿ

**(1ನೇ ಪುಟದಿಂದ)** ತನ್ನದೇ ಆದ ಹೆಸರು ಮಾಡಿರುವ ಈ ಬ್ಯಾಂಕನ್ನು, ಮತ್ತಷ್ಟು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಮಾಡುವು ದಾಗಿ ಭರವಸೆ ನೀಡಿದರು. ನೂತನ ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್ ಅವರೂ ಸಹ ತಮ್ಮ ಆಯ್ಕೆಗೆ ಧನ್ಯವಾದ ಹೇಳಿದರಲ್ಲದೇ, ಹಿರಿಯರು ತುಂಬಾ ಕಷ್ಟಪಟ್ಟು ಬೆಳೆಸಿದ ಈ ಬ್ಯಾಂಕನ್ನು, ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲು ಶ್ರಮಿಸುವುದಾಗಿ ತಿಳಿಸಿದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನಕುಮಾರ್, ಮೋತಿ ಸೈಕಲ್ ಮಾರ್ಟ್ ಮಾಲೀಕ ಟಿ. ಶಂಕರಪ್ಪ, ಲೆಕ್ಕ ಪರಿಶೋಧಕ ಮುಂಡಾಸ್ ವೀರೇಂದ್ರ, ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಕಣವಿ, ಹಿರಿಯ ವರ್ತಕ ಟಿ.ಜೆ. ಸುರೇಶ್, ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಚಿತ್ರ ನಿರ್ಮಾಪಕ ಮೇಕಾ ಮುರುಳೀಕೃಷ್ಣ, ಇಂಜಿನಿಯರ್ ಕೋಗುಂಡಿ ಕೊಟ್ರೇಶ್, ನಗರಪಾಲಿಕೆ ಮಾಜಿ ಮೇಯರ್ ಶ್ರೀಮತಿ ಸುಧಾ ಜಯರುದ್ರೇಶ್, ಪಂಚಮಸಾಲಿ ಸಮಾಜದ ಮುಖಂಡ ಬಾದಾಮಿ ಜಯಣ್ಣ, ನಿವೃತ್ತ ಇಂಜಿನಿಯರ್ ಬಾದಾಮಿ ಮಲ್ಲಿಕಾರ್ಜುನಪ್ಪ, ವರ್ತಕರಾದ ಎಸ್.ಕೆ. ಶಶಿಧರ, ಎಸ್.ಕೆ. ಶ್ರೀಧರ ಕೈಗಾರಿಕೋದ್ಯಮಿ ಮತ್ತಿಹಳ್ಳಿ ಸಂತೋಷ್, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ, ಎಸ್.ಕೆ. ಮಲ್ಲಿಕಾರ್ಜುನ್, ಪುಟ್ಟಪ್ಪ ಕಾಶೀಪುರ, ಸ್ವರೂಪ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಬಿಜೆಪಿ ಆಡಳಿತಕ್ಕೆ ಬೇಸತ್ತು ಕಾಂಗ್ರೆಸ್‌ಗೆ ಮತ ನೀಡಿದರೇ ಹೊರತು 'ಗ್ಯಾರಂಟಿ'ಗಳಿಗಾಗಿ ಅಲ್ಲ

### ಎಸ್‌ಡಿಪಿಐ ಜಿಲ್ಲಾ ಸಮಾವೇಶದಲ್ಲಿ ರಾಷ್ಟ್ರೀಯ ಕಾರ್ಯದರ್ಶಿ ರಿಯಾಜ್ ಫರಂಗಿಪೇಟೆ




ದಾವಣಗೆರೆ, ಫೆ. 28- ಬಿಜೆಪಿ ಆಡಳಿತಕ್ಕೆ ಬೇಸತ್ತು ಮತ್ತು ರಾಜ್ಯದ ಅಭಿವೃದ್ಧಿ, ಹಿತಾಸಕ್ತಿ ಮತ್ತು ಶಾಂತಿಯುತ ಜೀವನದ ನಿರೀಕ್ಷೆಯಲ್ಲಿ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಕಾಂಗ್ರೆಸ್‌ಗೆ ಮತ ನೀಡಿದರ ಹೊರತು, ಆ ಪಕ್ಷದ ಗ್ಯಾರಂಟಿಗಳಿಗೆ ಮರಳಾಗಿ ಅಲ್ಲ ಎಂದು ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯದರ್ಶಿ ರಿಯಾಜ್ ಫರಂಗಿಪೇಟೆ ಅಭಿಪ್ರಾಯಿಸಿದರು.

ನಗರದ ಎಸ್. ಎಸ್. ಶಾದಿ ಮಹಲ್‌ನಲ್ಲಿ, ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ಜಾತ್ಯತೀತ ಪಕ್ಷ ಎನಿಸಿಕೊಂಡ ಕಾಂಗ್ರೆಸ್‌ಗೆ ದಲಿತರು, ಹಿಂದುಳಿದವರು ಮತ್ತು ಹೆಚ್ಚಾಗಿ 90ರಷ್ಟು ಮುಸ್ಲಿಂ ಸಮುದಾಯ ಮತ ನೀಡುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ಶ್ರಮಿಸಿದರು. ಏಕೆಂದರೆ ಕಳೆದ ಬಿಜೆಪಿ ಸರ್ಕಾರ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಉದ್ದೇಶದಿಂದ ರಾಜ್ಯದಲ್ಲಿ ಕೋಮು ಸಂಘರ್ಷವನ್ನು ಉಂಟು ಮಾಡಿತ್ತು. ಇದರಿಂದ ಬೇಸತ್ತ ಜನರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರು. ಆದರೆ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ಕಳೆದ 10 ತಿಂಗಳ ಅವಧಿ ನೋಡಿದರೆ ಬಿಜೆಪಿಯನ್ನೇ ಮೀರಿಸಿದಂತಿದೆ ಎಂದು ಅವರು ದೂರಿದರು.

ಕಳೆದ ಚುನಾವಣೆಯಲ್ಲಿ ಇಬ್ಬರು ಎಸ್‌ಡಿಪಿಐನ ಶಾಸಕರನ್ನು ವಿಧಾನಸೌಧಕ್ಕೆ ಗೆಲ್ಲಿಸಿ ಕಳಿಸಿದ್ದರೆ ಎಲ್ಲಾ ಸಂಘರ್ಷಗಳಿಗೆ ತಡೆ ನೀಡಬಹುದಿತ್ತು. ಆದ್ದರಿಂದ ಮುಂದಿನ ದಿನಗಳಲ್ಲಿ ನಕಲಿ ಜಾತ್ಯತೀತ ಮುಖವಾಡ ಧರಿಸಿದಂತವರನ್ನು ತಿರಸ್ಕರಿಸಿ ನೈಜ, ಪರ್ಯಾಯವಾದ ಎಸ್‌ಡಿಪಿಐ ಪಕ್ಷವನ್ನು ಬೆಂಬಲಿಸಲು ಅವರು ಕರೆ ನೀಡಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಯಾಹಿಯಾ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಪಕ್ಷವು ತಾಯಿ ಮಕ್ಕಳ ಮತ್ತು ಯಾವುದೇ ಕುಟುಂಬಕ್ಕೆ ಸೀಮಿತವಾದ ಪಕ್ಷವಲ್ಲ, ಈ ಪಕ್ಷವು ಕಾರ್ಯಕರ್ತರ ಪಕ್ಷ, ಇಲ್ಲಿ ಸಾಮಾನ್ಯ ಕಾರ್ಯಕರ್ತನೂ ಜಿಲ್ಲಾಧ್ಯಕ್ಷನಾಗಬಹುದು ಎಂಬುದಕ್ಕೆ ನಾನೇ ಸಾಕ್ಷಿ ಮತ್ತು ಕೊರೊನಾ ಸಂದರ್ಭದಲ್ಲಿ ನಾವು ಯಾವುದೇ ಜಾತಿ ಮತ ನೋಡದೆ ಅವರವರ ಧಾರ್ಮಿಕ ವಿಧಿ ವಿಧಾನಗಳಂತೆ, ಜೀವದ ಹಂಗು ತೊರೆದು ಕಾರ್ಯನಿರ್ವಹಿಸಿದ್ದೇವೆ. ಅದೇ ರೀತಿ ರಾಮಕೃಷ್ಣ ಹೆಗಡೆ ನಗರ ನಿವಾಸಿಗಳಿಗೆ ಅನ್ಯಾಯ ಆದಾಗಲೂ ಅವರ ಜೊತೆ ನಿಂತಿದ್ದು ಎಸ್‌ಡಿಪಿಐ ಎಂದರು.

ಜಿಲ್ಲಾ ಕಾರ್ಯದರ್ಶಿ ಮೊಹಮ್ಮದ್ ಅಜರುದ್ದೀನ್ ಬಾತಿ ಸ್ವಾಗತಿಸಿದರು. ಪಕ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೋಹಸಿನ್ ವಿವರಿಸಿದರು ಮತ್ತು ಜಿಲ್ಲಾ ಕೋಶಾಧಿಕಾರಿ ಎ. ಆರ್. ತಾಹೀರ್ ವಂದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಪ್ರಧಾನ ಕಾರ್ಯದರ್ಶಿ ಫಯಾಜ್ ಅಹಮದ್, ಜಿಲ್ಲಾ ಉಪಾಧ್ಯಕ್ಷ ರಜ್ವಿ ರಿಯಾಜ್ ಅಹಮದ್, ಜಿಲ್ಲಾ ಸಮಿತಿ ಸದಸ್ಯ ಫರೀದ್ ಖಾನ್, ಮಾಜಿ ಜಿಲ್ಲಾಧ್ಯಕ್ಷ ಇಸ್ಮಾಯಿಲ್ ಜಬಿವುಲ್ಲಾ ಮತ್ತು ಹರಿಹರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಮಿವುಲ್ಲಾ ಮುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

# ನೀರಿನ ಸಮಸ್ಯೆಗೆ ಪಾಲಿಕೆ ಸದಸ್ಯರ ಆತಂಕ



**(1ನೇ ಪುಟದಿಂದ)** ಗೌರವ ಕೊಡುವುದಿಲ್ಲ. ಸದಸ್ಯರಿಗೆ ಬೇಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸದಸ್ಯ ಎ.ನಾಗರಾಜ್ ಹೇಳಿದಾಗ, ಹಿರಿಯ ಸದಸ್ಯ ಚಮನ್ ಸಾಬ್, ಮಂಜಾನಾಯ್ಕ ದನಿಗೂಡಿಸಿದರು.

ಸದಸ್ಯರಿಗೆ ಗೌರವ ಕೊಡದ ಅಧಿಕಾರಿಗಳು, ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಆಯುಕ್ತರಾದ ರೇಣುಕಾ ಭರವಸೆ ನೀಡಿದರು.

ಸದಸ್ಯರಾದ ಅಬ್ದುಲ್ ಲತೀಫ್, ಉಮಾ ಪ್ರಕಾಶ್, ಕೆ.ಎಂ. ವೀರೇಶ್, ಶಿವಾನಂದ, ಮೀನಾಕ್ಷಿ ಜಗದೀಶ್ ಇತರರು ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದರು.

ಸಿದ್ಧವೀರಪ್ಪ ಬಡಾವಣೆಯ ಯಾರದ್ದೋ ಆಸ್ತಿಗೆ ಇ ಸ್ವತ್ತು ಕೊಡಲಾಗಿದೆ. ಇಂತಹ ಅಕ್ರಮಗಳು ಬಹಳಷ್ಟು ನಡೆಯುತ್ತಿದ್ದು, ಇ-ಸ್ವತ್ತಿನ ಮೇಲೂ ಜನರಿಗೆ ನಂಬಿಕೆ ಇಲ್ಲವಾಗಿದೆ. ಇಂತಹ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ವಿಪಕ್ಷ ನಾಯಕ ಕೆ.ಪ್ರಸನ್ನ ಆಗ್ರಹಿಸಿದಾಗ ಗಮನಕ್ಕೆ ಬಂದ ಅಕ್ರಮಗಳ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ಹೇಳಿದರು.

ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದವರಿಗೆ ಎಂಡ್ರಾಸ್‌ಮೆಂಟ್ ಕೊಟ್ಟು, ಇ ಆಸ್ತಿಗೆ ಮತ್ತೆ ಅರ್ಜಿ ಸಲ್ಲಿಸುವಂತೆ ಹೇಳಲಾಗುತ್ತಿದೆ. ಜನರನ್ನು ಅಲೆದಾಡಿಸಲಾಗುತ್ತಿದೆ ಎಂದು ಪ್ರಸನ್ನ ಕುಮಾರ್ ಆರೋಪಿಸಿದರು.

ಆಸ್ತಿ ಕಣಕ್ಕೆ ಎಂದು ಜನರಿಂದ ದಾಖಲೆ ಪಡೆದು, ಮತ್ತೆ ಇ ಆಸ್ತಿಗಾಗಿ ದಾಖಲೆ ಪಡೆಯಲಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ 200-300 ರೂ. ಹೊರೆಯಾಗುತ್ತದೆ. ಒಮ್ಮೆ ಮಾತ್ರ ದಾಖಲೆ ಪಡೆಯುವಂತೆ ಎ.ನಾಗರಾಜ್ ಸಲಹೆ ನೀಡಿದರು.

ಎಲ್.ಡಿ. ಗೋಣೆಪ್ಪ, ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆ 19 ದಿನ ಮಾತ್ರ ಉಳಿದಿದ್ದು, ಮೂಲ ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳು ಮುಂದಾಗುತ್ತಿಲ್ಲ. ಈ ಭಾಗದ ಮೂವರು ನೀರುಗಂಟಿಗಳು ಅಗೌರವ ತೋರುತ್ತಿದ್ದಾರೆ ಎಂದರು.

ಉಪ ಮೇಯರ್ ಯಶೋಧ ಯಗ್ಗಪ್ಪ, ಸ್ಥಾಯಿ ಸಮಿತಿ ಸದಸ್ಯರುಗಳಾದ ಉದಯ್ ಕುಮಾರ್, ಅಬ್ದುಲ್ ಲತೀಫ್, ಮೀನಾಕ್ಷಿ ಜಗದೀಶ್, ಪಾಲಿಕೆ ಸದಸ್ಯರು, ಅಧಿಕಾರಿಗಳು ಈ ಸಂದರ್ಭದಲ್ಲಿದ್ದರು.

## ಟ್ಯಾಂಕರ್‌ಗಳ ಖರೀದಿಗೆ ಕ್ರಮ

**(1ನೇ ಪುಟದಿಂದ)** ಲೆಸ್ ಸ್ಟೀಲ್ ಟ್ಯಾಂಕರ್ ಖರೀದಿಗೆ ಸಲಹೆ ನೀಡಿದರು. ಕಸ ವಿಲೇವಾರಿಗೆ ಬಳಸುವ ಟ್ರ್ಯಾಕ್ಟರ್‌ಗಳು ಮಧ್ಯಾಹ್ನದ ನಂತರ ಖಾಲಿ ನಿಲ್ಲುತ್ತವೆ. ಟ್ಯಾಂಕರ್ ಅಷ್ಟೇ ಖರೀದಿಸಿದರೆ, ಟ್ರ್ಯಾಕ್ಟರ್ ಇಂಜಿನ್ ಬಳಸಿ ಟ್ಯಾಂಕರ್ ನೀರು ಸರಬರಾಜು ಮಾಡ ಬಹುದು ಎಂದಾಗ, ಆಯುಕ್ತರು ಟ್ಯಾಂಕರ್‌ಗಳ ಖರೀದಿಗೆ ಕ್ರಮ ವಹಿಸುವುದಾಗಿ ಹೇಳಿದರು.

ಮುಂದುವರಿದು ಮಾತನಾಡಿದ ಆಯುಕ್ತರು, ಬೋರ್‌ವೆಲ್ ಕೊರೆಸಲು 50 ಲಕ್ಷ ರೂ., ಮೋಟಾರ್ ಹಾಗೂ ಪಂಪ್‌ಗಳ ಖರೀದಿಗೆ 40 ಲಕ್ಷ ಹಾಗೂ ಪೈಪ್‌ಲೈನ್‌ಗಾಗಿ 30 ಲಕ್ಷ ರೂ.ಗಳ ಕ್ರಿಯಾ ಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ 1,023 ಬೋರ್ ವೆಲ್‌ಗಳಿವೆ. 11 ಬೋರ್‌ಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿದೆ. 13 ಬೋರ್‌ಗಳು ರಿಪೇರಿ ಹಂತದಲ್ಲಿವೆ. ಬೇಸಿಗೆ ಆರಂಭವಾಗಿರುವುದರಿಂದ ಇನ್ನೂ ಕೆಲ ಬೋರ್‌ಗಳಲ್ಲಿ ಅಂತರ್ಜಲ ಕುಸಿತ ಕಾಣಿಸಲಿದೆ ಎಂದು ಮಾಹಿತಿ ನೀಡಿದರು.

ಪ್ರತಿ ವಲಯಕ್ಕೂ 35 ಲಕ್ಷದಂತೆ 95 ಲಕ್ಷ ರೂ. ಬೋರ್ ಕೊರೆಸಲು ಹಾಗೂ ಸಾಮಗ್ರಿಗಳ ಖರೀದಿಗೆ ಮತ್ತು ಪೈಪ್‌ಲೈನ್‌ಗಾಗಿ 15 ಲಕ್ಷ ಮೀಸಲಿಡಲಾಗಿದೆ.

ಅದಲ್ಲದೇ, ಬೋರ್ ಕೊರೆಸಲು 50 ಲಕ್ಷ, ಮೋಟರ್ ಹಾಗೂ ಪಂಪ್ ಖರೀದಿಗೆ 40 ಲಕ್ಷ ಮತ್ತು ಪೈಲ್‌ಲೈನ್‌ಗಾಗಿ 30 ಲಕ್ಷ ರೂ. ಸೇರಿ 120 ಲಕ್ಷ ರೂ.ಗಳ ಕ್ರಿಯಾಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ರೇಣುಕಾ ತಿಳಿಸಿದರು.

**ನೀರಿನ ಕೊರತೆ ಇಲ್ಲ ಎಂದ ಇಂಜಿನಿಯರ್**

ನಗರದಲ್ಲಿ ಕುಂದುವಾಡ ಕೆರೆಯಲ್ಲಿರುವ ನೀರು 90 ದಿನಗಳ ವರೆಗೆ ಸರಬರಾಜು ಮಾಡಬಹುದು. ಟಿವಿ ಸ್ಟೇಷನ್ ಕೆರೆಯಲ್ಲಿನ ನೀರು 6.5 ಮೀಟರ್ ಇದ್ದು, 60 ದಿನಗಳ ವರೆಗೆ ಸಾಕಾಗುವಷ್ಟು ಲಭ್ಯವಿದೆ. ಮಾ.13ಕ್ಕೆ ಮತ್ತೆ ಭದ್ರಾ ನಾಲಾ ನೀರು ಬಂದಾಗ ಕೆರೆ ತುಂಬಿಸಿಕೊಳ್ಳಲಾಗುವುದು ಎಂದು ಇಂಜಿನಿ ಯರ್ ಸಚಿನ್ ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಸದಸ್ಯ ಕೆ.ಎಂ. ವೀರೇಶ್, ಇಂಜಿನಿಯರ್ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಟಿವಿ ಸ್ಟೇಷನ್ ಕೆರೆಯಲ್ಲಿ ನಾಲ್ಕೂವರೆ ಮೀಟರ್ ಮಾತ್ರ ಲಭ್ಯವಿದೆ ಎಂದು ಆರೋಪಿಸಿದರು.

## 'ಲ್ಯಾಂಡ್ ಬೀಟ್' ತಂತ್ರಾಂಶ

**(1ನೇ ಪುಟದಿಂದ)** ಲಭ್ಯವಾಗುತ್ತದೆ. ಈ ಸ್ಥಳಗಳಿಗೆ ನಿಗದಿತ ಅವಧಿಯಲ್ಲಿ ಭೇಟಿ ನೀಡಲು ಯಾವ ರೀತಿ ಪೊಲೀಸ್ ಬೀಟಿಂಗ್ ವ್ಯವಸ್ಥೆ ಇರುತ್ತದೆ. ಅದೇ ರೀತಿ ಸರ್ಕಾರಿ ಆಸ್ತಿಗಳ ಸಂರಕ್ಷಣೆ ಮಾಡಲು ಬೀಟಿಂಗ್ ವ್ಯವಸ್ಥೆಯನ್ನು ಆಪ್‌ನಲ್ಲಿ ಕಲ್ಪಿಸಲಾಗಿದೆ. ಈ ಆಪ್ ಮೂಲಕ ಪ್ರಾಯೋಗಿಕ ಸರ್ವೆಯನ್ನು ದೊಡ್ಡಬಾತಿಯಲ್ಲಿ ಜಿಲ್ಲಾಧಿಕಾರಿಯವರು ಖುದ್ದು ಕೈಗೊಂಡು ಸರ್ವೆ ನಂಬರ್ 34 ರಲ್ಲಿ ಸರ್ಕಾರಿ ಸ್ಮಶಾನ ಭೂಮಿ ಒತ್ತುವರಿಯಾಗಿದೆಯೋ ಇಲ್ಲವೋ ಎಂಬ ಮಾಹಿತಿಯನ್ನು ಖಚಿತಪಡಿಸಿಕೊಂಡರು. ಈ ಭೂಮಿಯು ಒತ್ತುವರಿಯಾಗಿರುವುದಿಲ್ಲ ಎಂಬುದು ಇದರಿಂದ ಮಾಹಿತಿ ಲಭ್ಯವಾಯಿತು. ಆಪ್ ಮೂಲಕ ಎಲ್ಲಾ ಸರ್ಕಾರಿ ಜಮೀನು, ಜಾಗಗಳನ್ನು ಸರ್ವೆ ಮಾಡಿ, ಜಿಯೋ ಫೆನ್ಸಿಂಗ್ ಮಾಡುವ ಮೂಲಕ ದತ್ತಾಂಶ ಸಂಗ್ರಹಕ್ಕೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳೊಂದಿಗೆ ತಹಶೀಲ್ದಾರ್ ಡಾ. ಅಶ್ವತ್ಥ್ ಹಾಗೂ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

## 2029ರಲ್ಲಿ ಏಕಕಾಲಕ್ಕೆ ಚುನಾವಣೆ

**(1ನೇ ಪುಟದಿಂದ)** ರಚಿಸಲು ಸಾಧ್ಯವಾಗದೇ ಇದ್ದರೆ, ವಿಧಾನಸಭೆಯ ಉಳಿದ ಅವಧಿಗಾಗಿ ಚುನಾವಣೆ ನಡೆಸಬೇಕು. ಉದಾಹರಣೆಗೆ : ಹೊಸ ಚುನಾವಣೆ ನಡೆಸಿದಾಗ, ಉಳಿದ ಅವಧಿ ಮೂರು ವರ್ಷವಾಗಿತ್ತು ಎಂದರೆ, ನೂತನ ಸರ್ಕಾರ ಮೂರು ವರ್ಷಗಳಿಗೆ ಮಾತ್ರ ಆಡಳಿತ ನಡೆಸಲಿದೆ ಎಂದು ಮೂಲಗಳು ವಿವರಿಸಿವೆ.

ಏಕಕಾಲಕ್ಕೆ ಚುನಾವಣೆ ನಡೆಸುವ ಸಂಬಂಧ ಕಾನೂನು ಆಯೋಗವಷ್ಟೇ ಅಲ್ಲದೇ, ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅವರ ನೇತೃತ್ವದ ಉನ್ನತ ಹಂತದ ಸಮಿತಿಯೂ ಕಾರ್ಯನಿರ್ವಹಿಸುತ್ತಿದೆ.

ಏಪ್ರಿಲ್ - ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಇದರ ಜೊತೆಗೆ ಕನಿಷ್ಠ ಐದು ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ವರ್ಷದಲ್ಲೇ ಮಹಾರಾಷ್ಟ್ರ, ಹರಿಯಾಣ ಹಾಗೂ ಜಾರ್ಖಂಡ್‌ಗಳಿಗೆ ಚುನಾವಣೆ ನಡೆಯಲಿದೆ.

ಮುಂದಿನ ವರ್ಷ ಬಿಹಾರ ಹಾಗೂ ದೆಹಲಿಗಳ ಚುನಾವಣೆ ನಡೆಯಲಿದೆ. 2026ರಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೆರಿ ಹಾಗೂ ಕೇರಳಗಳ ಚುನಾವಣೆ ನಡೆಯಲಿದೆ. 2027ರಲ್ಲಿ ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್ ಹಾಗೂ ಮಣಿಪುರಗಳಿಗೆ ಚುನಾವಣೆ ನಡೆಯಲಿದೆ.

2028ರಲ್ಲಿ ತ್ರಿಪುರ, ಮೇಘಾಲಯ, ನಾಗಾಲ್ಯಾಂಡ್, ಕರ್ನಾಟಕ, ಮಿಜೋರಾಂ, ಛತ್ತೀಸ್‌ಘಡ, ಮಧ್ಯ ಪ್ರದೇಶ, ರಾಜಸ್ಥಾನ ಹಾಗೂ ತೆಲಂಗಾಣಗಳಿಗೆ ಚುನಾವಣೆ ನಡೆಯಲಿದೆ.


**ಮನೆಗಳು, ಸೈಟುಗಳು ಮಾರಾಟಕ್ಕಿವೆ**
ಶಂಕರ ವಿಹಾರ ಬಡಾವಣೆ 30x50 ಮನೆ ಮಾರಾಟಕ್ಕಿದೆ, ಎಸ್.ಎಸ್. ಲೇಔಟ್ 40x80, ಬನಶಂಕರಿ 30x40, 30x50, 30x50, 5 ಎಕರೆ, 9 ಎಕ್ಕರೆ ನೀರಾವರಿ ಮಾರಾಟಕ್ಕಿದೆ.
99643 16777

**ಮನೆ ಮಾರಾಟಕ್ಕಿದೆ**
ಸರಸ್ವತಿ ಬಡಾವಣೆ ಡಾಬಾ ಸ್ಟಾಪ್ ಹತ್ತಿರ, ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ, 1ನೇ ಕ್ರಾಸ್‌ನಲ್ಲಿ ದಕ್ಷಿಣ ಮುಖಕ್ಕಿರುವ 20x30 ಅಳತೆಯ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
81057 82575, 99017 70997

**ಮನೆ ಬಾಡಿಗೆಗೆ ಬೇಕಾಗಿದೆ**
ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆಗೆ ಬೇಕಾಗಿದೆ. ಎಸ್.ಎಸ್. ಲೇಔಟ್, ಬಸವೇಶ್ವರ ಬಡಾವಣೆ, ಎಸ್.ಎನ್. ಲೇಔಟ್. ಸಂಪರ್ಕಿಸಿ :
86181 82332

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಮನೆ ಬಾಡಿಗೆಗಿದೆ**
ಕೊಂಡಜ್ಜಿ ರಸ್ತೆ, ಅಶೋಕ ನಗರ, ಮೇನ್ ರೋಡ್, 5ನೇ ಕ್ರಾಸ್ ಬಲಭಾಗ, ದಾವಣಗೆರೆ ಉತ್ತರಕ್ಕೆ ರಸ್ತೆ, ಮನೆ ಬಾಗಿಲು ಉತ್ತರಕ್ಕೆ
88841 67704

**Property Hub**
• EC
• Eswathu
• Building Licence
• Khatha Change
96118 66449

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬಂಗಾರದ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (SSLC ಪಾಸ್ ಆಗಿರಬೇಕು)
91484 65819

**ಮಳಿಗೆ ಬಾಡಿಗೆಗಿದೆ**
ಮಂಡಿಪೇಟೆ ದಾವಣಗೆರೆ.
96638 28812

**ಬೇಕಾಗಿದ್ದಾರೆ**
BAMS / MBBS ಡ್ಯೂಟಿ ಡಾಕ್ಟರ್ಸ್ ಬೇಕಾಗಿದ್ದಾರೆ. ಒಂದು ವರ್ಷ ಅನುಭವವಿರಬೇಕು
ಸಂಪರ್ಕಿಸಿ: ಆರೈಕೆ ಆಸ್ಪತ್ರೆ
ಸ್ಟೇಡಿಯಂ ಹತ್ತಿರ, ಹದಡಿ ರಸ್ತೆ, ದಾವಣಗೆರೆ.
ಮೊ.: 84315 41487
98455 74143

**ಬೇಕಾಗಿದ್ದಾರೆ**
ಅಕೌಂಟೆಂಟ್ ವಿತ್ ಟ್ಯಾಲಿ ಜ್ಞಾನವುಳ್ಳವರು, ಮತ್ತು ಪೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಉತ್ಸಾಹಿ ಹುಡುಗರು ಬೇಕಾಗಿದ್ದಾರೆ
ವಿನಾಯಕ ಇಂಡಸ್ಟ್ರೀಸ್,
ಇಂಡಸ್ಟ್ರೀಯಲ್ ಏರಿಯಾ, ಲೋಕಿಕೆರೆ ರಸ್ತೆ, ದಾವಣಗೆರೆ.
94481 50174

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x50 West, 60 ಅಡಿ ರೋಡಿಗಿದೆ, 30x40 East, 30x40 North, 30x50 West. ಪಾರ್ಕ್ ಎದುರುಗಡೆ ಇದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
30x40 East, ಬನಶಂಕರಿ ಲೇಔಟ್‌ನಲ್ಲಿ 30x40 West, ಡಾಲರ್ಸ್ ಕಾಲೋನಿಯ ಬನಶ್ರೀ ಲೇಔಟ್‌ನಲ್ಲಿ 40x40 South, 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ (ತರಳಬಾಳು) ಬಡಾವಣೆ ಸೈಟುಗಳು ಮಾರಾಟಕ್ಕಿವೆ, ವಿದ್ಯಾನಗರ ಪಶ್ಚಿಮ 30x50, 30x60, ಉತ್ತರ 30x60, ತರಳಬಾಳು ಬಡಾವಣೆ ಪಶ್ಚಿಮ 40x60, ಡಾಲರ್ಸ್ ಕಾಲೋನಿ ಉತ್ತರ 30x50 (ದೊಡ್ಡ ಪಾರ್ಕ್ ಹತ್ತಿರ)
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕಿದೆ**
ಶಿವ ಪಾರ್ವತಿ ಲೇಔಟ್‌ನಲ್ಲಿ ಪಶ್ಚಿಮಾಭಿಮುಖವಾಗಿ 30x40 ಅಳತೆಯು ಮಾಲೀಕರಿಂದ ನೇರವಾಗಿ ಮಾರಾಟಕ್ಕಿದೆ.
(ಬ್ರೋಕರ್‌ಗೆ ಅವಕಾಶವಿಲ್ಲ)
98450 98987, 63635 52021

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ತಕ್ಷಣ ಬೇಕಾಗಿದ್ದಾರೆ**
ಹೋಲ್‌ಸೇಲ್ ದಿನಸಿ ಅಂಗಡಿಯಲ್ಲಿ ಗುಮಾಸ್ತರ ಹುದ್ದೆಗೆ ಕನ್ನಡ ಮತ್ತು ಹಿಂದಿ ಮಾತನಾಡಲು ಬರುವಂತಹ ಯುವಕರು ಬೇಕಾಗಿದ್ದಾರೆ.
94482 02879, 79969 60606

**ಕೆಲಸಕ್ಕೆ ಬೇಕಾಗಿದ್ದಾರೆ**
NISARGA ENTERPRISES INTERIOR AND EXTERIOR DESIGNER OFFICE
SURYA COLOR DISTRIBUTOR SHOP
ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
MR. SRINIVAS Y.
9448534659, 8310092069

**ಕೆಲಸಕ್ಕೆ ಬೇಕಾಗಿದ್ದಾರೆ**
ಪಿಯುಸಿ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ.
77603 16576, 90080 55813

**ಸಪ್ಲೈಯರ್ ಬೇಕಾಗಿದ್ದಾರೆ**
ದಾವಣಗೆರೆ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ನುರಿತ ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ
80889 56656

**ಮನೆ ಬಾಡಿಗೆ/ಲೀಸ್‌ಗೆ**
1ನೇ ಮಹಡಿಯಲ್ಲಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆ /ಲೀಸ್ ಗೆ ದೊರೆಯುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)
ವಿಳಾಸ: ದೇವರಾಜ್ ಅರಸ್ ಬಡಾವಣೆ, ಸಿ ಬ್ಲಾಕ್, 1ನೇ ಕ್ರಾಸ್, ದಾವಣಗೆರೆ.
98448 59101

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 40x60 North, 120 ಅಡಿ ರೋಡಿಗಿದೆ, 50x80 East, 40x60 South, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕ್ರಯ ಪತ್ರ ಕಳೆದಿದೆ**
ಶ್ರೀ ಬಸವರಾಜಪ್ಪ ತಂದೆ ಸಿದ್ದಪ್ಪ 77 ವರ್ಷ, ವ್ಯವಸಾಯ ವೃತ್ತಿ, ಸಾ: ಚಿರಸ್ತಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ತೆಲಗಿ ಹೋಬಳಿ ಚಿರಸ್ತಹಳ್ಳಿ ಗ್ರಾಮದ ಸ.ನಂ. 224/ಬಿ, ವಿಸ್ತೀರ್ಣ :3 ಎಕರೆ 77 ಸೆಂಟ್ಸ್ ಜಮೀನನ್ನು ನಾನು ನನ್ನ ಮಕ್ಕಳು ಪಾಲು ವಿಭಾಗ ಮಾಡಿಕೊಂಡು ದಿನಾಂಕ :21.10.2022 ರಂದು ಪತ್ರ ಸಂಖ್ಯೆ : 4212ನೇದ್ದು ಹರಪನಹಳ್ಳಿ ಸಬ್ ರಿಜಿಸ್ಟರ್ ಕಛೇರಿಯಲ್ಲಿ ರಿಜಿಸ್ಟರ್ ಆಗಿದ್ದು, ಸದರಿ ದಾಖಲಾತಿಯು 25.01.2024 ರಂದು ಆಕಸ್ಮಿಕವಾಗಿ ಚಿರಸ್ತಹಳ್ಳಿಯಿಂದ ತೆಲಗಿ ಗ್ರಾಮಕ್ಕೆ ಜೆರಾಕ್ಸ್ ಮಾಡಲು ಹೋಗುವಾಗ ಕಳೆದುಹೋಗಿದೆ. ಸಿಕ್ಕವರು ಈ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 99016 14665

**ಬೇಕಾಗಿದ್ದಾರೆ**
ಎಸ್.ಎಲ್.ವಿ ಎಂಟರ್‌ಪ್ರೈಸಸ್
• ಕಂಪ್ಯೂಟರ್ ಡಿಸೈನಿಂಗ್
• ಆಪರೇಟರ್ ಹಾಗೂ
• ಆಫೀಸ್ ಬಾಯ್
ಬೇಕಾಗಿದ್ದಾರೆ.
ಎಸ್.ಎಸ್. ಲೇಔಟ್ 'ಎ' ಬ್ಲಾಕ್, 7ನೇ ಕ್ರಾಸ್, ಶಾರದಾಂಬ ದೇವಸ್ಥಾನದ ಹತ್ತಿರ.
96635 63837, 96860 34662

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.3.2024ರ ಬುಧವಾರ
ದಿ.7.3.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ದಾವಣಗೆರೆ-2.
Only officials
97405 69252

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರ ಬೇಕಾಗಿದ್ದಾರೆ.
ಸ್ಥಳ: ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ.
99004 38052, 97401 53513

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30, 20x30 ಅಕ್ಕ-ಪಕ್ಕ ದಕ್ಷಿಣ ದಿಕ್ಕಿನ ಸೈಟ್‌ಗಳು
95384 86666
63605 94165

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಪೂರ್ವ 40x60 ಅಕ್ಕ-ಪಕ್ಕ 30x70, 40x80, ಪಶ್ಚಿಮ 30x55, ಬನಶಂಕರಿ ಬಡಾವಣೆ ಪೂರ್ವ 30x50.
ಐಗೂರು ವಿಜಯಕುಮಾರ
99457 02495

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹೆಸರು ಬದಲಾವಣೆ**
ಶ್ರೀಮತಿ ಮಂಜುಳ ಜಿ. ಕೋಂ ಕೃಷ್ಣಮೂರ್ತಿ ಎನ್.ಆರ್. #314, ಚಾಮುಂಡೇಶ್ವರಿ ಟಾಕೀಸ್ ಹತ್ತಿರ, ನಿಟುವಳ್ಳಿ, ದಾವಣಗೆರೆ ವಾಸಿಯಾದ ನಾನು ನನ್ನ ಮಗಳ ಹೆಸರು ಸುಕನ್ಯಾ ಯೋಜನೆಯಲ್ಲಿ ಚಿನ್ಮಯಿ ಎನ್.ಕೆ. (Chinmayi N.K.) ಎಂದಾಗಿದ್ದು, ಜನನ ಪ್ರಮಾಣ ಪತ್ರದಲ್ಲಿ, ಶಾಲಾ ದಾಖಲೆಗಳಲ್ಲಿ ನನ್ನ ಮಗಳ ಹೆಸರು ಪ್ರಕೃತಿ ಎಮ್.ಕೆ. (Prakruthi M.K.) ಎಂದು ಇರುತ್ತದೆ. ಆದ್ದರಿಂದ ದಿನಾಂಕ : 22.2.2024 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಮಗಳ ಹೆಸರು ಪ್ರಕೃತಿ ಎಮ್.ಕೆ. ಎಂಬುದು ಸರಿ ಎಂದು ಪ್ರಮಾಣೀಕರಿಸಿದ್ದೇನೆ.
ಸಹಿ/-ಶ್ರೀಮತಿ ಮಂಜುಳ ಜಿ.

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಟಗರು ಮಾರಾಟಕ್ಕಿದೆ**
ಶ್ರೀ ದುಗ್ಗಮ್ಮದೇವಿ ಪ್ರಸನ್ನ
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**3 BED ROOM FLAT AVAILABLE FOR LEASE**
Semi Furnished 3 BHK with lift facility in SS layout, DAVANAGERE.
96204 99603

**WANTED**
Any Degree with Computer knowledge is must. for Male & Female.
*Contact : Exllent Electronics*
#2137/1, 4th Main, 3rd Cross, MCC 'A' Block, Davanagere - 577004
98865 15100

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**Use Summer Holidays Effectively**
**Kids Summer Computer Education**
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Davanagere.
bhoomikamatrimony.com
77603 16576
90080 55813

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಜ್ಯೋತಿಷ್ಯಾಲಯ**
ಓಂ ಶ್ರೀ ಕೊಡಂಗಲ್ಲೂರು ಭಗವತಿದೇವಿ
ಪಂಡಿತ್ ಸಂತೋಷ್ ಗುರೂಜಿ
ವ್ಯಾಪಾರ, ಆರೋಗ್ಯ, ಲಗ್ನ, ಸಂತಾನ, ಮಾಟ-ಮಂತ್ರ, ಸಾಲದ ಬಾಧೆ, ಮಾನಸಿಕ ಚಿಂತೆ, ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳು ಇದ್ದರೆ ಶಾಶ್ವತ ಪರಿಹಾರ. ಶತಃ ಸಿದ್ಧ.
99728 37663
ವಿಳಾಸ : ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 15 ನಿಮಿಷ ದೂರದಲ್ಲಿರುವ ದೊಡ್ಡ ಓಬಜ್ಜಿಹಳ್ಳಿ ಊರಿನಲ್ಲಿ ಸಿಮೆಂಟ್ ರಸ್ತೆಗೆ ಐದು ಎಕರೆ 3 ವರ್ಷದ ಅಡಿಕೆ ತೋಟ ಮಾರಾಟಕ್ಕಿದೆ, ತೋಟಕ್ಕೆ ಚಾನಲ್ ನೀರು ಜೊತೆಗೆ ಮೂರು ಬೋರ್ ಮತ್ತು ಗೆಸ್ಟ್ ಹೌಸ್ ಲಭ್ಯವಿದೆ. ಸಂಪರ್ಕಿಸಿ :
+91 84949 33669

**ಟೆಲಿಕಾಲರ್ ಬೇಕಾಗಿದ್ದಾರೆ**
(ಮಹಿಳೆಯರಿಗೆ ಮಾತ್ರ) ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಭಾಷೆ ಮಾತಾನಾಡಲು ಬರುವವರಿಗೆ ಆದ್ಯತೆ. ಕಂಪ್ಯೂಟರ್ ಬೇಸಿಕ್ ತಿಳಿದಿರಬೇಕು. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಕರೆಮಾಡಿ.
76765 36007
ಕರೆ ಮಾಡುವ ಸಮಯ : ಬೆಳಿಗ್ಗೆ 11.30ರಿಂದ ಸಂಜೆ 6.30ರವರೆಗೆ ಸಂಬಳ : 6000 ರೂಪಾಯಿಗಳು.

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ. ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
80733 42011

# ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ನಾಸೀರ್ ಹುಸೇನ್ ವಜಾಕ್ಕೆ ಒತ್ತಾಯ

**ನಗರದಲ್ಲಿ ಬಿಜೆಪಿ ಪ್ರತಿಭಟನೆ**



ದಾವಣಗೆರೆ, ಫೆ. 28- ರಾಜ್ಯಸಭಾ ಸದಸ್ಯರಾಗಿ ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಪಕ್ಷದ ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿರುವುದು ದೇಶ ವಿರೋಧಿ ಕೃತ್ಯವಾಗಿದ್ದು, ಈ ಕೂಡಲೇ ದೇಶದ್ರೋಹಿಗಳನ್ನು ಬಂಧಿಸಬೇಕು. ನಾಸೀರ್ ಹುಸೇನ್ ಅವರನ್ನು ಸದಸ್ಯ ಸ್ಥಾನದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ವತಿಯಿಂದ ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿನ ಅಮರ್ ಜವಾನ್ ಉದ್ಯಾನವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ನಂತರ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರಾದರೂ ಪೊಲೀಸರು 40 ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಿ, ಡಿಎಆರ್ ಮೈದಾನಕ್ಕೆ ಕರೆದೊಯ್ದು ನಂತರ ಬಿಡುಗಡೆ ಮಾಡಿದರು.

ಪ್ರತಿಭಟನೆ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾ ರೈತ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ಅವರು, ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿರುವುದು ದೇಶ ವಿರೋಧಿ ಕೃತ್ಯವಾಗಿದ್ದು, ಇದನ್ನು ಪ್ರಶ್ನಿಸಿದ ಮಾಧ್ಯಮ ಪ್ರತಿನಿಧಿಗಳ ಮೇಲೂ ದರ್ಪ ತೋರಿ, ಅಸಭ್ಯವಾಗಿ ವರ್ತಿಸಿರುವುದು ಸಲ್ಲದು. ಇದೊಂದು ಅನಾಗರಿಕ ಪ್ರವೃತ್ತಿ ಎಂದು ಕಿಡಿಕಾರಿದರು.

ಯುವ ಮೋರ್ಚಾ ಮುಖಂಡ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಕಾಂಗ್ರೆಸ್ ಪಕ್ಷ ದೇಶಕ್ಕೆ ಅಂಟಿಕೊಂಡಿರುವ ಮಾರಕ ಕಾಯಿಲೆ ಇದ್ದಂತೆ. ಅದರಲ್ಲೂ ದೇಶ ದ್ರೋಹದ ಕೆಲಸ ಇದಾಗಿದೆ. ಇಂತಹ ಖದೀಮರು ಕರ್ನಾಟಕದಿಂದ ಆಯ್ಕೆಯಾಗಿರುವುದು ಇಡೀ ಕನ್ನಡ ನಾಡಿನ ಜನತೆ ತಲೆ ತಗ್ಗಿಸುವಂತಾಗಿದೆ. ತಕ್ಷಣ ಕಾಂಗ್ರೆಸ್ ಪಕ್ಷ ಇಂತಹ ದೇಶ ದ್ರೋಹಿ ಚಟುವಟಿಕೆಗಳ ಬಗ್ಗೆ ತನ್ನ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

ಆರ್.ಎಲ್. ಶಿವಪ್ರಕಾಶ್, ನಾಸೀರ್ ಅಹ್ಮದ್, ಟಿಪ್ಪುಸುಲ್ತಾನ್ ಮಾತನಾಡಿದರು. ಪ್ರತಿಭಟನೆಯಲ್ಲಿ ಯುವ ಮುಖಂಡರಾದ ಜಿ.ಎಸ್. ಶ್ಯಾಮ್, ಹೆಚ್.ಪಿ ವಿಶ್ವಾಸ್, ಶಿವನಗೌಡ ಪಾಟೀಲ್, ಪಿ.ಸಿ. ಶ್ರೀನಿವಾಸ್, ಧನುಷ್, ಕಿಶೋರ್ ಕುಮಾರ್, ಅತಿಥ್ ಅಂಬರ್‌ಕರ್, ಅಣಬೇರು ನಂದಕುಮಾರ್, ರಾಜೇಶ್ವರಿ ಟಿಂಕರ್ ಮಂಜಣ್ಣ ಮತ್ತಿತರರು ಪಾಲ್ಗೊಂಡಿದ್ದರು.

# ಮಾರಕ ಕೃಷಿ ಕಾಯ್ದೆಗಳ ರದ್ಧತಿಗೆ ಆಗ್ರಹಿಸಿ ರೈತ ಸಂಘದ ಪ್ರತಿಭಟನೆ



ದಾವಣಗೆರೆ, ಫೆ. 28- ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು. ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂಬುದು ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಮೇಟಿ ಬಣ) ಕಾರ್ಯಕರ್ತರು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು

ಜಯದೇವ ವೃತ್ತದಿಂದ ಜಿಲ್ಲಾಡಳಿತ ಭವನದವರೆಗೆ ಬೈಕ್ ಮೂಲಕ ತೆರಳಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಗುಮ್ಮನೂರು ಬಸವರಾಜ್ ಮಾತನಾಡಿ, ರೈತರ ಚಳವಳಿಯನ್ನು ಹತ್ತಿಕ್ಕುವ ಕೆಲಸ ಮಾಡಬಾರದು. ಯುವ ರೈತ ಯುಖಂಡ ಶುಭಕರನ್ ಸಿಂಗ್ ಹತ್ಯೆ ಮಾಡಿರುವುದನ್ನು ಖಂಡಿಸಿದರು.

ಮೃತ ರೈತ ಕುಟುಂಬಕ್ಕೆ ಸಾಂತ್ವನ ಹೇಳುವದಷ್ಟೇ ಅಲ್ಲದೇ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಮಿತಿ ರಚನೆ ಮಾಡಬೇಕು ಮತ್ತು ಕೂಡಲೇ ಹಕ್ಕುಪತ್ರ ನೀಡಬೇಕು. ಎಲ್ಲಾ ತಾಲ್ಲೂಕುಗಳಲ್ಲೂ ಬಗರ್ ಹುಕ್ಕುಂ ಸಭೆಗಳನ್ನು ನಡೆಸಬೇಕೆಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸರ್ಕಾರ ರೈತರ ಖಾತೆಗೆ ಬೆಳೆ ಹಾನಿ ಪರಿಹಾರ 35 ಸಾವಿರ ರೂ. ಘೋಷಣೆ ಮಾಡಬೇಕು. ಬೆಳೆ ವಿಮೆ ಬಿಡುಗಡೆ ಮಾಡಬೇಕು. ಬ್ಯಾಂಕ್ ಅಧಿಕಾರಿಗಳು ರೈತರ ಮೇಲೆ ದೌರ್ಜನ್ಯ ಎಸಗಿ, ಬಲವಂತವಾಗಿ ಸಾಲ ವಸೂಲು ಮಾಡಬಾರದು ಎಂದು ಹೇಳಿದರು.

ಗ್ರಾಮ ಪಂಚಾಯತಿಗೆ ಒಂದರಂತೆ ಗೋಶಾಲೆ ತೆರೆಯಬೇಕು. ನೀರು, ಮೇವು ಒದಗಿಸಬೇಕು. ರೈತರ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ ಹಗಲು ಏಳು ತಾಸು ವಿದ್ಯುತ್ ಸರಬರಾಜು ಮಾಡಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಕೆಂಚಮ್ಮನಹಳ್ಳಿ ಹನುಮಂತಪ್ಪ, ಕಿತ್ತೂರು ಹನುಮಂತಪ್ಪ, ಸುನೀಲ್, ಮಲ್ಲಿಕಾರ್ಜುನ್ , ಚಿಕ್ಕಬೂದಿಹಾಳ್ ಭಗತ್ ಸಿಂಹ, ದೊಣ್ಣೆಹಳ್ಳಿ ಲೋಕಣ್ಣ, ನೀರ್ಥಡಿ ತಿಪ್ಪೇಶ್, ಕೋಲ್ಕುಂಟೆ ಬಸವರಾಜ್, ಜಗದೀಶ್, ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಭಾರತದ ಘನತೆಯನ್ನು ಎತ್ತರಕ್ಕೆ ಏರಿಸಿದ ಸಿ.ವಿ.ರಾಮನ್



ದಾವಣಗೆರೆ, ಫೆ. 28 - ನಗರದ ಮೋತಿವೀರಪ್ಪ ಪ್ರೌಢಶಾಲೆಯಲ್ಲಿ ಸರ್ ಸಿ.ವಿ. ರಾಮನ್ ಶತಮಾನೋತ್ಸವದ ಸ್ಮರಣೆಯ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಬಾಪೂಜಿ ತಾಂತ್ರಿಕ ವಿದ್ಯಾಲಯದ ಸಹ ಪ್ರಾಧ್ಯಾಪಕ ಜಗದೀಶ್ ಕಾರ್ಯಕ್ರಮವನ್ನು ಉದ್ಘಾಟಿಸಿ, ನಮ್ಮ ಪೂರ್ವಜರ ಅಪರೂಪದ ಸಂಶೋಧನೆಗಳ ಕಾರಣದಿಂದ ಮನುಷ್ಯ ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೌಢಶಾಲೆಯ ಉಪಪ್ರಾಂಶುಪಾಲರಾದ ಕಲ್ಪಿತ ರಾಣಿ ಮಾತನಾಡಿ, ಭಾರತಕ್ಕಷ್ಟೇ ಅಲ್ಲದೆ, ಆ ಕಾಲದ ಏಷ್ಯಾ ಖಂಡದಲ್ಲಿಯೇ ಪ್ರಪ್ರಥಮ ಬಾರಿಗೆ ಭೌತಶಾಸ್ತ್ರದ ಸಂಶೋಧನೆಗೆ ನೊಬೆಲ್ ಪ್ರಶಸ್ತಿ ಪಡೆದ ಮೊಟ್ಟಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ರಾಮನ್ ಪಾತ್ರರಾದರು.ಅತ್ಯುನ್ನತ ಪ್ರಶಸ್ತಿಗಳಾದ ಭಾರತ ರತ್ನ, ನೊಬೆಲ್, ಮಟ್ಟಿಕ್ಯುಸಿ ಪ್ರಶಸ್ತಿ, ಫ್ರಾಂಕ್ಲಿನ್ ಪ್ರಶಸ್ತಿ, ಲೆನಿನ್ ಶಾಂತಿ ಪ್ರಶಸ್ತಿ. ಹೀಗೆ ಹಲವಾರು ಪ್ರಶಸ್ತಿ ಗೌರವಗಳಿಗೆ ಪಾತ್ರರಾದ ಸಿ.ವಿ.ರಾಮನ್ ಭಾರತದ ಘನತೆಯನ್ನು ಎತ್ತರಕ್ಕೆ ಏರಿಸಿದರು ಎಂದರು.

82 ವರುಷಗಳ ಕಾಲ ಅರ್ಥಪೂರ್ಣ ಜೀವನ ಸಾಗಿಸಿದ ರಾಮನ್ ಅವರ ಮರಣಾನಂತರವೂ ಜಗತ್ತು ಅವರ ಸಾಧನೆಗಳನ್ನು ಕೊಂಡಾಡುತ್ತಿದೆ.

1987 ರಲ್ಲಿ ರಾಮನ್ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಕೃತಜ್ಞತೆಯಿಂದ ಭಾರತವು ಫೆ. 28ನೇ ತಾರೀಖಿನ ಈ ದಿನವನ್ನು ಸರ್ ಸಿ.ವಿ. ರಾಮನ್ ಅವರ ನೆನಪಿಗಾಗಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಎಂದು ಇಡೀ ಭಾರತದಾದ್ಯಂತ ಆಚರಿಸಲಾಗುತ್ತಿದೆ.

ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸಿಕೊಂಡು, ಸರ್.ಸಿ.ವಿ. ರಾಮನ್, ಹೋಮಿ ಜಹಾಂಗೀರ್ ಬಾಬಾ, ಜಗದೀಶ್ ಚಂದ್ರ ಬೋಸ್ ರೀತಿಯಲ್ಲಿ ವಿಜ್ಞಾನಿಗಳಾಗಿ ದೇಶಕ್ಕೆ, ಮನುಜ ಕುಲಕ್ಕೆ ಕೊಡುಗೆ ನೀಡುವಂತೆ ಉಪ ಪ್ರಾಂಶುಪಾಲ ಕಲ್ಪಿತರಾಣಿ ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸಹಾಯಕ ನಿರ್ದೇಶಕರಾದ ಆನಂದ್, ಬಿ.ಆರ್.ಸಿ. ಕೇಂದ್ರದ ಭುವನೇಶ್ವರಿ, ಹಿರಿಯ ಶಿಕ್ಷಕರಾದ ಮಹದೇವಪ್ಪ, ನಾಗರತ್ನ, ಕುಬೇರ ನಾಯ್ಕ್, ನಾಗರಾಜ್, ಚೇತನಾ, ಸುಜಾತ, ಸೇರಿದಂತೆ ಎಲ್ಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಲ್ಲಿ ವೈಚಾರಿಕ ಮನೋಭಾವವನ್ನು ಉತ್ತೇಜಿಸುವ ಪ್ರತಿಜ್ಞಾ ವಿಧಿಯನ್ನು ಹಿರಿಯ ಶಿಕ್ಷಕರಾದ ಮಹದೇವಪ್ಪ ಬೋಧಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕಿ ನಾಗರತ್ನ ಸ್ವಾಗತಿಸಿ, ಅಮೃತಾ ವಂದಿಸಿದರು.

# ಮಾದಾರ ಚನ್ನಯ್ಯ ಪೀಠ ತ್ಯಜಿಸುವಂತೆ ಒತ್ತಾಯ

ದಾವಣಗೆರೆ, ಫೆ. 28- ಬುದ್ಧ, ಬಸವ, ಅಂಬೇಡ್ಕರ್ ಅವರ ಆದರ್ಶ ಪಾಲಿಸದೇ ಮನು ಸಂಸ್ಕೃತಿ ಪಾಲನೆ ಮಾಡುತ್ತಿರುವ ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷರು ಪೀಠ ತ್ಯಜಿಸುವಂತೆ ಮಾದಿಗರ ಸಾಂಸ್ಕೃತಿಕ ಸಂಘ ಒತ್ತಾಯಿಸಿದೆ.

ಪೀಠಾಧ್ಯಕ್ಷ ವಿರುದ್ಧ ಮಾರ್ಚ 10 ರಂದು ಚಿತ್ರದುರ್ಗದಲ್ಲಿ ಸಮಾಜ ಬಾಂಧವರಿಂದ ಮುಕ್ತ ಸಂವಾದ ಹಮ್ಮಿಕೊಂಡಿದ್ದೇವೆ ಎಂದು ಸಂಘದ ರಾಜ್ಯಾಧ್ಯಕ್ಷ ಪ್ರೊ.ಸಿ.ಕೆ. ಮಹೇಶ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚಿತ್ರದುರ್ಗ ಮಾದಾರ ಪೀಠದ ಪೀಠಾಧ್ಯಕ್ಷರ ನಡವಳಿಕೆಗಳು ಬುದ್ಧ, ಬಸವ, ಅಂಬೇಡ್ಕರ್ ವಿಚಾರಗಳಿಗೆ ವಿರುದ್ಧವಾಗಿವೆ. ಮಠ ಸ್ಥಾಪನೆ ಮಾಡಿದಾಗ ಹಾಗೂ ಪೀಠಕ್ಕೆ ಮುಖ್ಯಸ್ಥರಾದ ವೇಳೆ ಸಮಾಜದ ಅಭಿವೃದ್ಧಿಗೆ ಬದ್ಧರಾಗಿ ಕೆಲಸ ಮಾಡುವುದಾಗಿ ಮಠದ ನೇತೃತ್ವ ವಹಿಸಿಕೊಂಡಿದ್ದರು. ಬುದ್ಧ, ವಚನಕಾರರ ಆಶಯ ಅನುಷ್ಠಾನಗೊಳಿಸುವುದು ಸೇರಿದಂತೆ ಸಮಾಜವನ್ನು ಮುಖ್ಯ ವಾಹಿನಿಗೆ ತರುವುದಾಗಿತ್ತು. ಆದರೆ ಪೀಠಾಧ್ಯಕ್ಷರು ಬ್ರಾಹ್ಮಣ ಪರಂಪರೆಗೆ ಒಳಗಾಗುತ್ತಿದ್ದಾರೆ. ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ತತ್ವಾದರ್ಶಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪೀಠಾಧ್ಯಕ್ಷರು ಆರ್‌ಎಸ್‌ಎಸ್ ಹಾಗೂ ಬಿಜೆಪಿ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಪ್ರೊ. ಬಿ. ಕೃಷ್ಣಪ್ಪ ಅವರ ಮಾರ್ಗದರ್ಶನದಲ್ಲಿ ದಲಿತ ಸಂಘಟನೆಗಳು ಅನ್ಯಾಯದ ಪರವಾಗಿ ದನಿ ಎತ್ತುತ್ತಾ ಮಾದಿಗ ಸಮಾಜದ ಅಭಿವೃದ್ಧಿಗೆ ಮುನ್ನುಡಿ ಹಾಕಿದ್ದರು. ಆದರೆ ಪೀಠಾಧ್ಯಕ್ಷರು ಇದರ ವಿರುದ್ಧ ಇರುವುದರಿಂದ ಪೀಠ ತ್ಯಜಿಸಿ ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಮುಂದಾಗಲಿ. ಆದರೆ ಸಮಾಜದ ಹೆಸರು ಹೇಳಿಕೊಂಡು ಬಂದರೆ ಸಹಿಸುವುದಿಲ್ಲ ಎಂದರು.

ಅನೇಕ ಬಾರಿ ಶ್ರೀಗಳಿಗೆ ಮುಖಾಮುಖಿ ಭೇಟಿಯಾಗಿ ಶರಣರ ಆಲೋಚನೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದು ಎಂದು ಹೇಳಿದ್ದೆವು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಅದಕ್ಕಾಗಿ ಮಾರ್ಚ್ 10 ರಂದು ಚಿತ್ರದುರ್ಗದ ಪತ್ರಿಕಾ ಭವನದಲ್ಲಿ ಬೆಳಿಗ್ಗೆ 11 ಕ್ಕೆ ಮುಕ್ತ ಸಂವಾದ ಹಮ್ಮಿಕೊಳ್ಳಲಾಗಿದೆ. ಈ ಸಂವಾದದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸಮಾಜ ಬಾಂಧವರು ಆಗಮಿಸಲಿದ್ದಾರೆಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ. ಕುಮಾರ್, ಎಂ. ಹನುಮಂತಪ್ಪ, ಡಿ. ದುರುಗೇಶ್, ಎಂ. ಮಲ್ಲಿಕಾರ್ಜುನ್, ಕೆ.ಎಂ. ಅಂಜಿನಪ್ಪ, ಕೆ. ರುದ್ರಪ್ಪ, ಹೆಚ್.ಸಿ. ಮಲ್ಲಪ್ಪ, ಪರಶುರಾಮ್ ಉಪಸ್ಥಿತರಿದ್ದರು.

# ಇಸ್ರೋ ವಿಜ್ಞಾನಿಯಾಗುವ ಆಶಯದಲ್ಲಿ ಯುವ ಜನತೆ



ದಾವಣಗೆರೆ, ಫೆ. 28 - 2047ರ ಹೊತ್ತಿಗೆ ಭಾರತ ದೇಶವು ತನ್ನದೇ ಆದ ಅಂತರಿಕ್ಷ ನಿಲ್ದಾಣ ಹೊಂದಲಿದೆ ಎಂದು ಇಸ್ರೋ ಹಿರಿಯ ವಿಜ್ಞಾನಿ ಡಾ. ಟಿ.ಎಸ್. ಗೋವಿಂದರಾಜು ತಿಳಿಸಿದರು.

ನಗರದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಜಿಲ್ಲಾ ಬಾಲಭವನ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಂದ್ರಯಾನ-3ರ ಯಶಸ್ಸಿನ ಮೊದಲು ಕ್ರಿಕೆಟ್ ಆಟಗಾರ ಅಥವಾ ಸಿನಿಮಾ ನಟರು ಮಕ್ಕಳಿಗೆ ಆದರ್ಶವಾಗಿದ್ದರು. ಈಗ ದಿಢೀರನೆ ಯುವಜನತೆ ನಾನು ಇಸ್ರೋ ವಿಜ್ಞಾನಿಯಾಗಬೇಕೆಂದು ಅಪೇಕ್ಷಿಸುತ್ತಾರೆ. ಇದಕ್ಕೆ ಕಾರಣ ಚಂದ್ರಯಾನ-3ರ ಯಶಸ್ಸು. ಈ ಯಶಸ್ಸು ಸುಲಭವಾಗಿ ದೊರೆತಿದ್ದಲ್ಲ. ಚಂದ್ರಯಾನ-3ರ ವೈಫಲ್ಯದ ಸಮಯದಲ್ಲಿ ಇಡೀ ದೇಶ ಹಾಗೂ ಸರ್ಕಾರ ನಮ್ಮ ಜೊತೆ ನಿಂತಿದ್ದಕ್ಕೆ ನಾವು ಪುಟಿದೆದ್ದು ಯಶಸ್ಸುಳಿಸಿದೆವು. ಇದರಿಂದಾಗಿ ಚಂದ್ರನ ಬಗೆಗಿನ ಹಲವು ವ್ಯಾಖ್ಯಾನಗಳು ಬದಲಾಗಿವೆ. ಚಂದ್ರನ ಅಧ್ಯಯನ ನಿಖರವಾಗಿ ನಡೆಯುತ್ತಿದೆ. ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಭಾರತ ದಾಪುಗಾಲಿಡುತ್ತಿದೆ. ಸರ್ಕಾರದ ಸಹಕಾರ ಉತ್ತಮವಾಗಿದ್ದಲ್ಲಿ ನಾವು ಸದ್ಯದಲ್ಲಿಯೇ ಮಾನವ ಸಹಿತ ಚಂದ್ರಯಾನ ಕೈಗೊಳ್ಳುತ್ತೇವೆ ಎಂದರು.

ಈಗಾಗಲೇ ನಾವು ನ್ಯಾವಿಗೇಷನ್ ಉಪಗ್ರಹದ ಸಹಾಯದಿಂದ ನಮ್ಮ ಸ್ವಂತ ನ್ಯಾವಿಗೇಷನ್ ಹೊಂದಿದ್ದೇವೆ. ಇದರ ಚಿಪ್‌ನ ಗಾತ್ರ ದೊಡ್ಡದಿರುವುದರಿಂದ ಈವರೆಗೂ ಮೊಬೈಲ್‌ನಲ್ಲಿ ಅಳವಡಿಸಿಲ್ಲ. ಆದರೆ, ನಮ್ಮ ವಾಯುಸೇನೆ ಮತ್ತು ಜಲಸೇನೆ ಈಗಾಗಲೇ ಇದನ್ನು ಬಳಸುತ್ತಿವೆ ಎಂದರು. ಬಾಹ್ಯಾಕಾಶದಲ್ಲಿ ಭಾರತದ ಎಲ್ಲಾ ಸಾಧನೆಗಳನ್ನು ಮತ್ತು ವಿಜ್ಞಾನ ದಿನಾಚರಣೆಯ ಮಹತ್ವವನ್ನು ಅವರು ಸರಳ ಕನ್ನಡದಲ್ಲಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಕೆ.ಟಿ. ನಾಗರಾಜನಾಯ್ಕ ವಹಿಸಿಕೊಂಡಿದ್ದರು. ಕರಾವಿಪ ಗೌರವಾಧ್ಯಕ್ಷರಾದ ಡಾ. ಜೆ.ಬಿ. ರಾಜ್, ಖಗೋಳತಜ್ಞ ಎಂ.ಟಿ. ಶರಣಪ್ಪ, ವಿಜ್ಞಾನ ಪರಿಷತ್ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ, ಕರಾವಿಪ ಜಿಲ್ಲಾ ಸಮಿತಿ ಸದಸ್ಯ ಸಿದ್ದೇಶಿ ಕತ್ತಲಗೆರೆ, ಬಾಲಭವನದ ಸಂಯೋಜಕರಾದ ಎಸ್.ಬಿ. ಶಿಲ್ಪ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಗರದ ವಕೀಲರ ಭವನದಲ್ಲಿ ಇಂದು ಇ-ಸ್ಟ್ಯಾಂಪ್ ಕೌಂಟರ್ ಉದ್ಘಾಟನೆ

ದೇವರಾಜ ಅರಸು ಬಡಾವಣೆಯ ನ್ಯಾಯಾಲಯ ಆವರಣದಲ್ಲಿರುವ ವಕೀಲರ ಸಂಘದ ಸಭಾ ಭವನದಲ್ಲಿ ಇಂದು ಬೆಳಿಗ್ಗೆ 10.30 ಗಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎಂ. ಹೆಗಡೆ ಅವರು ವಕೀಲರ ಸಹಕಾರ ಸಂಘದ ವತಿಯಿಂದ ಆರಂಭಿಸಲಾಗಿರುವ ಸ್ಟೇಷನರಿ ಸಾಮಗ್ರಿ ಹಾಗೂ ಇ-ಸ್ಟ್ಯಾಂಪ್ ಮಾರಾಟ ಕೌಂಟರ್ ಉದ್ಘಾಟಿಸಲಿದ್ದಾರೆ. ಸಹಕಾರ ಸಂಘದ ಅಧ್ಯಕ್ಷ ಹೆಚ್. ದಿವಾಕರ್, ಉಪಾಧ್ಯಕ್ಷ ಡಿ.ಹೆಚ್.ಗವಿಯಪ್ಪ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಉಪಾಧ್ಯಕ್ಷ ಜಿ.ಕೆ. ಬಸವರಾಜ್, ಕಾರ್ಯದರ್ಶಿ ಎಸ್.ಬಸವರಾಜ್, ಸಹಕಾರ್ಯದರ್ಶಿ ಎ.ಎಸ್ ಬಸವರಾಜ್ ಮತ್ತು ಸಂಘದ ನಿರ್ದೇಶಕರು ಭಾಗವಹಿಸುವರು ಎಂದು ಕಾರ್ಯದರ್ಶಿ ನಾಗಯ್ಯ ತಿಳಿಸಿದ್ದಾರೆ

# ನಗರದಲ್ಲಿ ಇಂದು ಚಿಂತನೆ-ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಟ್ರಸ್ಟ್ ಕಛೇರಿಯಲ್ಲಿ ಇಂದು ಸಂಜೆ 6 ರಿಂದ 7.15ರವರೆಗೆ 'ಗಾಂಧೀಜಿ ಜೀವನದಲ್ಲಿ ಸಂವಿಧಾನ' ವಿಷಯವಾಗಿ ಶಿವನಕೆರೆ ಬಸವಲಿಂಗಪ್ಪ ಚಿಂತನೆ ಮತ್ತು ಸಂವಾದ ನಡೆಸಿಕೊಡಲಿದ್ದಾರೆ.

ಈ ಸಂದರ್ಭದಲ್ಲಿ ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್ ಉಪಸ್ಥಿತರಿರುವರು.

# ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು

ದಾವಣಗೆರೆ, ಫೆ. 27- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇನ್ನರ್ ವ್ಹೀಲ್ ಸಂಸ್ಥೆ ವಿದ್ಯಾನಗರ ಇವರು ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಬರುವ ಮಾರ್ಚ್ 4ರ ಸೋಮವಾರ ಬೆಳಿಗ್ಗೆ 11ಗಂಟೆಗೆ ಏರ್ಪಡಿಸಲಾಗಿದೆ.

ವಿವಾಹ ವಿಚ್ಛೇದನ ಸಾಧಕ, ಬಾಧಕಗಳು ವಿಷಯದ ಬಗ್ಗೆ ಚರ್ಚಾ ಸ್ಪರ್ಧೆ ಹಾಗೂ ಭಾರತದ ಪ್ರಪ್ರಥಮ ಸಾಧಕ ಮಹಿಳೆಯರು (ಇವರಲ್ಲಿ ಒಬ್ಬರ ಬಗ್ಗೆ) ಭಾಷಣ ಸ್ಪರ್ಧೆ ನಡೆಯಲಿದ್ದು, ಹೆಸರು ಸಲ್ಲಿಸಲು ಮಾರ್ಚ್ 1 ಕಡೆಯ ದಿನವಾಗಿದೆ. ಆಸಕ್ತರು ಮಂಜುಳಾ ಕರ್ಜಗಿ (94826 00894), ಪ್ರೇಮಾ ಮಹೇಶ್ವರಪ್ಪ (94810 10502), ವಿಜಯಾ ಕಡೇಕೊಪ್ಪ (94495 02623) ಇವರಲ್ಲಿ ಹೆಸರು ನೋಂದಾಯಿಸಬಹುದಾಗಿದೆ.

# ಪ್ರಯೋಗ - ಪ್ರಾತ್ಯಕ್ಷಿಕೆಯೊಂದಿಗೆ ವಿಜ್ಞಾನ ದಿನಾಚರಣೆ

**ಮಲೇಬೆನ್ನೂರು**



ಮಲೇಬೆನ್ನೂರು, ಫೆ. 28 - ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಪಟೇಲ್ ಬಸಪ್ಪ ಎಜುಕೇಷನ್ ಅಸೋಸಿಯೇಷನ್‌ನ ರಾಜರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾಸಂಸ್ಥೆಯಲ್ಲಿ ಹತ್ತು ಹಲವು ವಿಜ್ಞಾನ ಪ್ರಯೋಗ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆ ಮೂಲಕ ಅಂತರರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು.

ಸುಮಾರು 20 ಕ್ಕೂ ಅಧಿಕ ವಿಜ್ಞಾನದ ಪ್ರಯೋಗಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿ ಪ್ರಾಯೋಗಿಕವಾಗಿ ವಿವರಿಸಿದರು. 10ನೇ ತರಗತಿಯ ಪ್ರಿಯದರ್ಶಿನಿ ಎಂಬ ವಿದ್ಯಾರ್ಥಿನಿ ಪ್ರದರ್ಶಿಸಿದ ಛತ್ರಿಯಲ್ಲಿ ಸೋಲಾರ್ ವಿದ್ಯುತ್ ಬ್ಯಾಟರಿ ಹಾಗೂ ಸೋಲಾರ್ ಪ್ಲೇಟ್ ಅಳವಡಿಸಿ ಫ್ಯಾನ್ ತಯಾರಿಸುವ ವಿಧಾನ ಅತ್ಯಾಕರ್ಷಕವಾಗಿತ್ತು.

ಉಳಿದಂತೆ 4ನೇ ತರಗತಿಯ ಗೌರಿಕಾ ಮೇಲ್ಮೈ ಒತ್ತಡದ ಬಗ್ಗೆ, 7ನೇ ತರಗತಿಯ ಎನ್. ಎಸ್. ಯಶಸ್ವಿನಿ ತೇಲುವಿಕೆ ಬಗ್ಗೆ, 4ನೇ ತರಗತಿಯ ಸೈಯದಾ ಥೆಹ್ರೀಮ್ ನಿಂಬೆ ಮೂಲಕ ಜ್ವಾಲಾಮುಖಿಯ ಬಗ್ಗೆ, 9ನೇ ತರಗತಿಯ ನಿದಾ ಸಮ್ರೀನ್ ನ್ಯೂಟನ್ ಡಿಸ್ಕ್ ಬಗ್ಗೆ, 6ನೇ ತರಗತಿಯ ಮದೀಹ ಖಾನುಮ್ ಉಪ್ಪಿನ ದ್ರಾವಣದಲ್ಲಿ ನೀರಿನ ಸಾಂದ್ರತೆ ಬಗ್ಗೆ, 6ನೇ ತರಗತಿಯ ಮಾನ್ಯ ಜಿಪಿ ಗ್ರಾಫೈಟ್ ಮೂಲಕ ವಿದ್ಯುತ್ ತಯಾರಿ ಬಗ್ಗೆ, 6ನೇ ತರಗತಿಯ ರಿದಾ ಸಮ್ರೀನ್ ಕಂಪಾಸ್ ಬಗ್ಗೆ, 4ನೇ ತರಗತಿಯ ಹುದಾ ಫಹ್ರೀನ್ ನೃತ್ಯ ಪಾಪ್‌ಕಾರ್ನ್ ಬಗ್ಗೆ, 8ನೇ ತರಗತಿಯ ಕೆ.ಜಿ. ತರುಣ್ ನೀರಿನ ಕಾರಂಜಿ ಕುರಿತು, 7ನೇ ತರಗತಿಯ ಸಿ.ಎಸ್. ಕಿಶನ್ ಕುಮಾರ್ ಜೀರ್ಣಾಂಗ ವ್ಯವಸ್ಥೆ ಬಗ್ಗೆ, 4ನೇ ತರಗತಿಯ ಧನುಷ್ ನ್ಯೂಟನ್‌ನ ಲೋಲಕದ ಕುರಿತು ಹಾಗೂ 8ನೇ ತರಗತಿಯ ಹರ್ಷ ಉಪ್ಪು ನೀರು ಮೂಲಕ ವಿದ್ಯುತ್ ಕುರಿತಂತೆ ಪ್ರಯೋಗ ಮಾಡಿ ಪ್ರದರ್ಶಿಸಿ ವಿವರಿಸಿದರು .

ಪ್ರಾಂಶುಪಾಲರಾದ ಶ್ರೀಮತಿ ಜಿ.ಓ. ಸುಜಾತ ಮಾತನಾಡಿ ವಿಜ್ಞಾನ ದಿನಾಚರಣೆಯ ಮಹತ್ವ, ಹಿನ್ನೆಲೆ, ರಾಮನ್ ಎಫೆಕ್ಟ್ ಸೇರಿದಂತೆ ಇತರೆ ವಿಷಯಗಳ ಮಾಹಿತಿ ನೀಡಿದರು.

ಮುಖ್ಯೋಪಾಧ್ಯಾಯ ಎಸ್. ಶಶಿಧರ್, ಬಿ.ಎಲ್. ಗಂಗಾಧರ ನಿಟ್ಟೂರ್, ಶಿಕ್ಷಕಿಯರಾದ ಕವಿತಾ ಕೊಮಾರನಹಳ್ಳಿ, ಜೆ.ವಿ. ಲಕ್ಷ್ಮಿದೇವಿ, ಜಯಲಕ್ಷ್ಮಿ, ಭಾಗ್ಯ ಪ್ರಸನ್ನ, ಸಂಗೀತ, ಶ್ವೇತ ಬಸವನ ಕೋಟೆ, ಕುಸುಮ ಹಾಗೂ ಸಂಸ್ಥೆಯ 1 ರಿಂದ 10 ನೇ ತರಗತಿವರೆಗಿನ ವಿದ್ಯಾರ್ಥಿಗಳು ಹಾಜರಿದ್ದರು.

# ನನಗೆ ಎಂ.ಪಿ ಟಿಕೆಟ್ ದೊರೆಯುವ ಸಾಧ್ಯತೆ ಹೆಚ್ಚಿದೆ

## ಹರಿಹರ : ಕಾಂಗ್ರೆಸ್ ಕಾರ್ಯಕರ್ತರ ಮತ್ತು ಮುಖಂಡರ ಸಭೆಯಲ್ಲಿ ಜಿ.ಬಿ.ವಿನಯ್‌ಕುಮಾರ್



ಹರಿಹರ, ಫೆ. 28 - ಅತಿ ಶೀಘ್ರದಲ್ಲಿ ಎಂ.ಪಿ. ಚುನಾವಣೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವ ಹಂತದಲ್ಲಿ ಇದ್ದು, ಬಹಳಷ್ಟು ಜನರಿಗೆ ಕುತೂಹಲ, ಆತಂಕ, ಭಯ ಇದ್ದು, ನಾನು ಪ್ರಜಾಪ್ರಭುತ್ವದ ಹಕ್ಕಿನ ಅಡಿಯಲ್ಲಿ ಟಿಕೆಟ್ ಕೇಳಿದ್ದು, ನನಗೆ ಟಿಕೆಟ್ ದೊರೆಯುವ ಸಾಧ್ಯತೆ ಹೆಚ್ಚಾಗಿದೆ ಎಂದು ರಾಷ್ಟ್ರೀಯ ಯುವ ಕಾಂಗ್ರೆಸ್ ಔಟ್ ರೀಚ್ ಸೆಲ್ ರಾಜ್ಯ ಉಪಾಧ್ಯಕ್ಷ ಜಿ.ಬಿ.ವಿನಯಕುಮಾರ್ ಹೇಳಿದರು.

ಅವರು, ನಗರದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮತ್ತು ಮುಖಂಡರ ಸಭೆಯಲ್ಲಿ ಮಾತನಾಡಿದರು.

ಮತದಾರರು ಕೂಡ ಜಾತಿ ವ್ಯವಸ್ಥೆ, ಕುಟುಂಬ ರಾಜಕಾರಣದ ವಿರುದ್ಧ ಹೋರಾಟ ಮಾಡಬೇಕು ಮತ್ತು ಅಸಹಾಯಕ ರೀತಿಯಲ್ಲಿ ಇರದೇ ಸ್ವಾಭಿಮಾನ ಮತ್ತು ಆತ್ಮಗೌರವದಿಂದ ಇರುವ ನಿಟ್ಟಿನಲ್ಲಿ ಚಿಂತನೆ ಮಾಡಿ ಪ್ರಜಾಪ್ರಭುತ್ವದ ಅಡಿಯಲ್ಲಿ ಪ್ರತಿಯೊಬ್ಬರಿಗೂ ಹಕ್ಕು ಇರುತ್ತದೆ ಎಂದು ಅರಿತುಕೊಂಡು ತಮ್ಮ ಮತವನ್ನು ಚಲಾಯಿಸಲು ಮುಂದಾಗಬೇಕಿದೆ. ಮತದಾರರು ಸ್ವಾಭಿಮಾನಿಗಳಾಗಿ ಆತ್ಮಗೌರವದ ಅಡಿಯಲ್ಲಿ ಮತವನ್ನು ಹಾಕುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕುವಂತವರಾಗಬೇಕು ಎಂದರು.

ಈಗಿರುವ ಹಾಲಿ ಎಂ.ಪಿ. ಯವರು ಕ್ಷೇತ್ರದ ನೂರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಓಡಾಡಿ ಅಭಿವೃದ್ಧಿ ಮಾಡದೇ ಇರೋದಕ್ಕೆ ಅವರಿಗೆ ಜನ ಮನ್ನಣೆ ಕಡಿಮೆ ಆಗಿದೆ.

ನಾನು ಎಂ.ಪಿ. ಯಾಗಿ ಆಯ್ಕೆಯಾದರೆ, ಹರಿಹರ ನಗರದಲ್ಲಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಕನಿಷ್ಟ ಮೂರು ಸಾವಿರ ಜನರು ಇರುವ ಸ್ಥಳಕ್ಕೆ ಒಂದು ಪಿ.ಯು ಕಾಲೇಜು ನಿರ್ಮಾಣ ಮತ್ತು ಕ್ರೀಡಾ ಅಕಾಡೆಮಿ, ಸೈನ್ಸ್ ಅಂಡ್ ಟೆಕ್ನಾಲಜೀಸ್ ಮ್ಯೂಸಿಯಂ ಸೇರಿದಂತೆ ಹಲವಾರು ಅಭಿವೃದ್ಧಿ ಯೋಜನೆಗಳ ಪ್ರಣಾಳಿಕೆ ಬಿಡುಗಡೆಯನ್ನು ಅತಿ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ಮುಖಂಡ ರಘು ದೊಡ್ಡಮನೆ ಮಾತನಾಡಿದರು. ಈ ಸಂದರ್ಭದಲ್ಲಿ ಚಂದ್ರಪ್ಪ ಗೋವಿನಾಳ್, ಜಾಫರ್, ಶಿವಕುಮಾರ್, ರಾಜನಹಳ್ಳಿ ಗ್ರಾ.ಪಂ ಸದಸ್ಯ ನಾಗೇಂದ್ರಪ್ಪ, ಬೊಂಬೆ ನಾಗರಾಜ್, ಸಿರಿಗೆರೆ ಮಾಜಿ ಗ್ರಾ.ಪಂ ಸದಸ್ಯ ಹಾಲೇಶಪ್ಪ, ಭರಮಪ್ಪ, ಭಾಗ್ಯಮ್ಮ, ರಂಗಸ್ವಾಮಿ, ವೈ.ರಘುಪತಿ, ಜಿ.ವಿ.ಪ್ರವೀಣ್, ರಾಹುಲ್ ಮೆಹರ್ವಾಡೆ, ಪ್ರೀತಂ ಬಾಬು, ರಮೇಶ್, ಹರಳಹಳ್ಳಿ ಪಕ್ಕೀರಪ್ಪ, ಶಾಹು ಇತರರು ಹಾಜರಿದ್ದರು.

# ಸಾಮಾನ್ಯ ಸಭೆಯಲ್ಲಿ ಪಾಕ್‌ಪರ ಘೋಷಣೆ ಪ್ರಸ್ತಾಪ : ಆಡಳಿತ-ವಿಪಕ್ಷಗಳ ವಾಕ್‌ಸಮರ

ದಾವಣಗೆರೆ, ಫೆ. 28 - ನಿನ್ನೆ ವಿಧಾನಸಭೆ ಆವರಣದಲ್ಲಿ ರಾಜ್ಯ ಸಭಾ ಸದಸ್ಯ ನಾಸಿರ್ ಅಹ್ಮದ್ ಅವರ ಬೆಂಬಲಿಗರು ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ್ದಾರೆ ಎನ್ನಲಾದ ವಿಷಯ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷ ಸದಸ್ಯರ ವಾಕ್ ಸಮರಕ್ಕೆ ಕಾರಣವಾಯಿತು.

ಸಭೆಗೂ ಮುನ್ನ ಬಿಜೆಪಿ ಸದಸ್ಯರು ಕಪ್ಪು ಬಟ್ಟೆ ಧರಿಸಿ, ಪಾಲಿಕೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಪಾಕ್ ಪರ ಘೋಷಣೆ ಕೂಗಿದ್ದನ್ನು ಖಂಡಿಸಿ, ಅವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಘೋಷಣೆ ಕೂಗಿ ನಂತರ ಸಭೆಗೆ ಆಗಮಿಸಿದರು.

ಈ ಕುರಿತ ನಿರ್ಣಯವೊಂದನ್ನು ಸಾಮಾನ್ಯ ಸಭೆಯಲ್ಲಿ ಕೈಗೊಳ್ಳಬೇಕು ಎಂದು ಸಭೆಯ ಆರಂಭದಲ್ಲಿಯೇ ವಿಪಕ್ಷ ನಾಯಕ ಪ್ರಸನ್ನ ಕುಮಾರ್ ಪ್ರಸ್ತಾಪಿಸುತ್ತಿದ್ದಂತೆ, ಆಡಳಿತ ಪಕ್ಷದ ಸದಸ್ಯರು ತಿರುಗಿ ಬಿದ್ದರು.

ಪಾಕ್ ಪರ ಘೋಷಣೆ ಕೂಗಿರುವುದು ಇನ್ನೂ ಸಾಬೀತಾಗಿಲ್ಲ. ತನಿಖೆ ನಡೆಯುತ್ತಿದೆ. ಘೋಷಣೆ ಕೂಗಿದ್ದು ನಿಜವೇ ಆದರೆ ಕ್ರಮ ಕೈಗೊಳ್ಳಲಿ. ಅದಕ್ಕೆ ನಮ್ಮ ಬೆಂಬಲವೂ ಇದೆ. ಆದರೆ ಸಾಮಾನ್ಯ ಸಭೆಯಲ್ಲಿ ಖಂಡನಾ ನಿರ್ಣಯ ಸರಿಯಲ್ಲ. ಅಭಿವೃದ್ಧಿ ವಿಚಾರಗಳ ಚರ್ಚೆ ನಡೆಯಲಿ ಎಂದು ಆಗ್ರಹಿಸಿದಾಗ, ಸದಸ್ಯರುಗಳಾದ ಚಮನ್ ಸಾಬ್, ಅಬ್ದುಲ್ ಲತೀಫ್, ಗಡಿಗುಡಾಳ್ ಮಂಜುನಾಥ್ ಇತರರು ದನಿಗೂಡಿಸಿದರು.

ಈ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರುಗಳ ನಡುವೆ ವಾಕ್‌ಸಮರವೇ ನಡೆಯಿತು. ಸಭೆ ಗೊಂದಲದ ಗೂಡಾಯಿತು. ರಾಜ್ಯ ಸಭೆಯಲ್ಲಿ ಸೋಲು ಒಪ್ಪಿಕೊಳ್ಳದೇ ಹತಾಷೆಯಿಂದ ಈ ರೀತಿ ಮಾತನಾಡುತ್ತಿದ್ದೀರಿ ಎಂದು ಗಡಿಗುಡಾಳ್ ಮಂಜುನಾಥ್ ಕುಟುಕಿದರು. ನಿಮ್ಮ ಪಕ್ಷದ ಏಜೆಂಟರೇ ಹಾಗೆ ಕೂಗಿರಬಹುದು ಎಂದು ಚಮನ್ ಸಾಬ್ ಆರೋಪಿಸಿದರು.

ಎಡಿಟ್ ಮಾಡಿರುವ ವಿಡಿಯೋ ನೋಡಿ ಈ ರೀತಿ ಮಾತನಾಡಬೇಡಿ. ಪಾಕ್ ಪರ ಘೋಷಣೆ ಕೂಗಿದ್ದು ಸಾಬೀತಾದರೆ ಅವನನ್ನು ಗಲ್ಲಿಗೇರಿಸಲಿ ಎಂದರು.

ಏತನ್ಮಧ್ಯೆ ಕಾಂಗ್ರೆಸ್ ಸದಸ್ಯ ಪಾಮೇನಹಳ್ಳಿ ನಾಗರಾಜ್, ಬಿಜೆಪಿ ಸದಸ್ಯರು ರಾಷ್ಟ್ರಗೀತೆ ಹಾಗೂ ನಾಡಗೀತೆ ಹಾಡುವಾಗ ಕಪ್ಪು ಪಟ್ಟಿ ಧರಿಸಿಕೊಂಡು ನಾಡಿಗೆ, ರಾಷ್ಟ್ರಕ್ಕೆ ಅವಮಾನ ಮಾಡಿದ್ದಾರೆ ಎಂದು ಹೇಳಿದರು.

ಕಪ್ಪುಪಟ್ಟಿ ಧರಿಸಿ ರಾಷ್ಟ್ರಗೀತೆಗೆ ಅವಮಾನ ಮಾಡಿದ ಬಿಜೆಪಿ ಸದಸ್ಯರನ್ನು ಸಭೆಯಿಂದ ಹೊರ ಹಾಕುವಂತೆ ಎ.ನಾಗರಾಜ್ ಪಟ್ಟು ಹಿಡಿದರು.

ಈ ವೇಳೆ ರಾಷ್ಟ್ರಗೀತೆಗೆ ಅವಮಾನ ಮಾಡಿದ ಬಿಜೆಪಿ ಸದಸ್ಯರಿಗೆ ಧಿಕ್ಕಾರ ಎಂದು ಕಾಂಗ್ರೆಸ್ ಸದಸ್ಯರು ಘೋಷಣೆ ಕೂಗಿದರು. ದೇಶ ದ್ರೋಹಿಗಳಿಗೆ ಬೆಂಬಲ ಸೂಚಿಸುವ ಆಡಳಿತ ಪಕ್ಷಕ್ಕೆ ಧಿಕ್ಕಾರ ಎಂದು ಬಿಜೆಪಿ ಸದಸ್ಯರು ಘೋಷಣೆ ಕೂಗಿದರು. ಸಭೆಯಲ್ಲಿ ಕೋಲಾಹಲ ಉಂಟಾಯಿತು.

ಮೇಯರ್ ವಿನಾಯಕ ಪೈಲ್ವಾನ್, ಸಭೆಯನ್ನು ಐದು ನಿಮಿಷ ಮುಂದೂಡಿದರು. ನಂತರ ಆರಂಭವಾದ ಸಭೆಯಲ್ಲಿ ಎರಡೂ ಪಕ್ಷಗಳ ಸದಸ್ಯರು ಶಾಂತವಾಗಿ ಪಕ್ಷಭೇದ ಮರೆತು ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

# ಪರಿಷತ್‌ನಲ್ಲಿ ಕೈ ಮಿಲಾಯಿಸುವ ಹಂತಕ್ಕೆ ಹೋದ ಸದಸ್ಯರು



ಬೆಂಗಳೂರು, ಫೆ. 28 - ವಿಧಾನಸೌಧದ ಆವರಣದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಲಾಗಿದೆ ಎಂಬ ಆರೋಪ ವಿಧಾನಪರಿಷತ್‌ನಲ್ಲಿ ಪ್ರತಿಧ್ವನಿಸಿ ಪರಿಸ್ಥಿತಿ ಮಾರ್ಷಲ್‌ಗಳ ಮಧ್ಯ ಪ್ರವೇಶದ ಹಂತಕ್ಕೆ ಹೋಗಿತ್ತು.

**ಜಬ್ಬಾರ್ - ರವಿಕುಮಾರ್ ಚಕಮಕಿ, ಮಾರ್ಷಲ್‌ಗಳ ಮಧ್ಯ ಪ್ರವೇಶ**

ವಿಧಾನಪರಿಷತ್ತಿನಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಪ್ರಸ್ತಾಪಿಸಿ ಇದು 'ದೇಶದ್ರೋಹಿ ಸರ್ಕಾರ' ಎಂದರು.

ಇದರಿಂದ ಆಕ್ರೋಶಗೊಂಡ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬಾರ್ 'ಅವನ ಬಾಯಿ ಬಂದ್ ಮಾಡಿ' ಎಂದು ರವಿಕುಮಾರ್ ಅವರ ಮೇಲೆ ಏಕವಚನ ಪ್ರಯೋಗ ಮಾಡಿದರು. ಇದರಿಂದ ವಿಧಾನಪರಿಷತ್‌ನಲ್ಲಿ ಗದ್ದಲ ಜೋರಾಯಿತು.

ಅಬ್ದುಲ್ ಜಬ್ಬಾರ್ ಮಾತಿಗೆ ರೊಚ್ಚಿಗೆದ್ದ ಬಿಜೆಪಿ ಸದಸ್ಯರು ಏಕವಚನದಲ್ಲಿ ಮಾತಾಡಿದರೆ ಸರಿ ಇರಲ್ಲ ಎಂದರು. ಬಳಿಕ ರವಿಕುಮಾರ್ ಎದ್ದು ಅಬ್ದುಲ್ ಜಬ್ಬಾರ್ ಬಳಿ ಹೋಗಲು ಮುಂದಾದರು. ರವಿಕುಮಾರ್ ಜೊತೆ ತುಳಸಿ ಮುನಿರಾಜುಗೌಡ ಮುನ್ನುಗ್ಗಿ ಹೋದರು. ಎರಡೂ ಕಡೆಯ ಸದಸ್ಯರು ಸಭಾಪತಿಗಳ ಮುಂದೆಯೇ ಕೈ ಕೈ ಮಿಲಾಯಿಸಲು ಮುಂದಾದರು. ಈ ವೇಳೆ ಪರಿಸ್ಥಿತಿಯನ್ನು ನಿಯಂತ್ರಿಸಲು ಮಾರ್ಷಲ್‌ಗಳು ಹರಸಾಹಸಪಟ್ಟರು.

ಮಧ್ಯ ಪ್ರವೇಶಿಸಿದ ಸಚಿವ ಹೆಚ್.ಕೆ.ಪಾಟೀಲ್ ಎರಡೂ ಕಡೆಯವರನ್ನು ಸಮಾಧಾನಪಡಿಸಿ, ಕ್ಷಮೆ ಕೇಳುವಂತೆ ಸಲಹೆ ನೀಡಿದರು. ಇದಕ್ಕೆ ಎನ್. ರವಿಕುಮಾರ್, ದೇಶದ ಪರವಾಗಿ ಮಾತನಾಡಿದ್ದೇನೆ. ಅದು ಕ್ಷಮೆ ಕೇಳುವ ವಿಷಯವಾ? ಎಂದರು.

ಅಬ್ದುಲ್ ಜಬ್ಬಾರ್ ನಾನು ಆಡಿದ ಮಾತು ವಾಪಸ್ ಪಡೆಯುತ್ತೇನೆ ಎಂದು ಹೇಳಿದಾಗ ಪರಿಸ್ಥಿತಿ ತಿಳಿಯಾಯಿತು.

# ಪಾಕ್ ಚುನಾವಣಾ ಅಕ್ರಮ : ಎರಡು ಆಡಿಯೋಗಳು ಬಯಲು

ಲಾಹೋರ್/ಕರಾಚಿ, ಫೆ. 28 – ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆದಿರುವ ಬಗ್ಗೆ ಮುತಾಹಿದಾ ಕ್ವಾಮಿ ಮೂವ್‌ಮೆಂಟ್ - ಪಾಕಿಸ್ತಾನ ಪಕ್ಷದ ಇಬ್ಬರು ಮುಖ್ಯ ನಾಯಕರು ಆಡಿರುವ ಮಾತುಗಳು ಸಾಮಾಜಿಕ ಜಾಲತಾಣದಲ್ಲಿ ಬಯಲಾಗಿವೆ.

ಇಂತಹ ಒಂದು ಸಂಭಾಷಣೆಯಲ್ಲಿ ಮಾತನಾಡಿರುವ ಸಿಂಧ್ ರಾಜ್ಯಪಾಲ ಕಮ್ರಾನ್ ಟೆಸ್ಸೋರಿ, 'ನಮ್ಮ ಜನಾದೇಶ ಶೇ.100ರಷ್ಟು ನಕಲಿ' ಎಂದು ಅವರು ಹೇಳುತ್ತಿದ್ದಾರೆ ಎಂದಿದ್ದಾರೆ.

ಈ ಹಿಂದೆ 2018ರಲ್ಲಿ ಚುನಾವಣೆ ನಡೆದಾಗ ಎಂ.ಕ್ಯೂ.ಎಂ. - ಪಿ. ಪಕ್ಷ ಏಳು ಸ್ಥಾನ ಪಡೆದಿತ್ತು. ಆಗ ನಿಜವಾದ ಮತ ಬ್ಯಾಂಕ್ ಇತ್ತು. ಫೆಬ್ರವರಿ 8ರಂದು ನಾವು ಮತ ಗಳಿಸಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ.

ಇನ್ನೊಂದು ಸೋರಿಕೆಯಾದ ಆಡಿಯೋದಲ್ಲಿ ಎಂ.ಕ್ಯೂ.ಎಂ. - ಪಿ. ಪಕ್ಷದ ಉಪ ಸಂಚಾಲಕ ಮುಸ್ತಫಾ ಕಮಲ್ ಮಾತನಾಡಿ, ನಮ್ಮ ಜನಾದೇಶ ಶೇ.100ರಷ್ಟು ನಕಲಿ ಎಂದು ಪಿ.ಪಿ. ಪಿ. ಪಕ್ಷ ಹೇಳುತ್ತಿದೆ. ಶಾಸನ ಸಭೆಯಲ್ಲಿ ನಮ್ಮನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂದಿದ್ದಾರೆ.

ಆಡಿಯೋ ಅನ್ನು ಸಮರ್ಥಿಸಿಕೊಂಡಿರುವ ಮುಸ್ತಫಾ ಕಮಲ್, ಇದರಲ್ಲಿ ಹೊಸದೇನೂ ಇಲ್ಲ. ನಮ್ಮ ಜನಾದೇಶ ನಕಲಿ ಎಂದು ವಿರೋಧಿ ಪಕ್ಷಗಳು ಹೇಳುತ್ತಿವೆ ಎಂದಿದ್ದಾರೆ.

ಎಂ.ಕ್ಯೂ.ಎಂ. - ಪಿ. ಪಕ್ಷವು ಕರಾಚಿಯಿಂದ ರಾಷ್ಟ್ರೀಯ ಶಾಸನಸಭೆಗೆ 17 ಸ್ಥಾನ ಪಡೆದಿದೆ. ಈ ಬಗ್ಗೆ ಪಿ.ಟಿ.ಐ. ಪಕ್ಷ ಆಕ್ಷೇಪಿಸಿತ್ತು.

# ಡಿಎಂಕೆ ಜಾಹೀರಾತಿನಲ್ಲಿ ಚೀನಾ ಬಾವುಟ : ಪ್ರಧಾನಿ ತರಾಟೆ

ನವದೆಹಲಿ, ಫೆ. 28 – ಭಾರತದ ಬಾಹ್ಯಾಕಾಶ ಯಶಸ್ಸಿಗೆ ಸಂಬಂಧಿಸಿದಂತೆ ತಮಿಳುನಾಡಿನ ಡಿ.ಎಂ.ಕೆ. ಸಚಿವರೊಬ್ಬರು ಪ್ರಕಟಿಸಿದ್ದ ಜಾಹೀರಾತಿನಲ್ಲಿ ಚೀನಾ ಬಾವುಟ ಕಾಣಿಸಿಕೊಂಡಿದ್ದು ಮುಜುಗರಕ್ಕೆ ಕಾರಣವಾಗಿದೆ.

ಈ ಬಗ್ಗೆ ಡಿ.ಎಂ.ಕೆ.ಯನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಬಾಹ್ಯಾಕಾಶದಲ್ಲಿ ಭಾರತ ಗಳಿಸಿದ ಯಶಸ್ಸಿಗೆ ಡಿ.ಎಂ.ಕೆ. ಅಗೌರವ ತಂದಿದೆ ಎಂದಿದ್ದಾರೆ.

ಸಚಿವೆ ಅನಿತಾ ರಾಧಾಕೃಷ್ಣನ್ ಪ್ರಕಟಿಸಿದ್ದ ಜಾಹೀರಾತಿನಲ್ಲಿ, ರಾಕೆಟ್ ಮೇಲೆ ಚೀನಾ ಧ್ವಜದ ರೀತಿಯ ಚಿತ್ರವಿತ್ತು.

ಜಾಹೀರಾತನ್ನು ಸಮರ್ಥಿಸಿಕೊಂಡಿರುವ ಡಿ.ಎಂ.ಕೆ. ವಕ್ತಾರ ಜೆ. ರವೀಂದ್ರನ್, ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಯಶಸ್ಸು ಕಂಡ ದೇಶಗಳನ್ನು ರಾಕೆಟ್‌ಗಳ ಮೂಲಕ ಬಿಂಬಿಸಲಾಗಿದೆ ಎಂದಿದ್ದಾರೆ.

# ವೀರೇಶ ದೊರೆಯೇ ನಿನಗಾರು ಸರಿಯೇ?



ದಾವಣಗೆರೆ: ತಾಲ್ಲೂಕಿನ ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಬುಧವಾರ ಸಂಜೆ ಅಪಾರ ಜನ ಸಾಗರದ ನಡುವೆ ವಿಜೃಂಭಣೆಯಿಂದ ನೆರವೇರಿತು.

ಶ್ರೀ ವೀರಭದ್ರ ಸ್ವಾಮಿ ಹಾಗೂ ರೇವಣಸಿದ್ದೇಶ್ವರ ಸ್ವಾಮಿ ರಥೋತ್ಸವದಲ್ಲಿ ಆಸೀನರಾದ ನಂತರ ಪ್ರಥಮ ಪೂಜೆಯಾಗಿ ಬಾವುಟದ ಹರಾಜು ನಡೆಯಿತು. ಆವರಗೊಳ್ಳದ ಸತೀಶ್ ಬಾಬು ಎಂಬುವವರು 3,01,001 ರೂ.ಗಳಿಗೆ ಹರಾಜು ಮೂಲ ಝುಂಡಾ ತಮ್ಮದಾಗಿಸಿಕೊಂಡರು. ನಂತರ ಶ್ರೀ ಬೀರೇಶ್ವರ ದೇವರು ರಥೋತ್ಸವದ ಪ್ರದಕ್ಷಿಣೆ ಹಾಕಿದಾಗ ರಥೋತ್ಸವ ಮುಂದೆ ಸಾಗಿತು. ಹರ ಹರ ಮಹದೇವಾ ಎಂಬ ಭಕ್ತರು ಹರ್ಷೋದ್ಘಾರ ಮುಗಿಲು ಮುಟ್ಟಿತು. ನಂತರ ಸರದಿ ಸಾಲಿನಲ್ಲಿ ನಿಂತು ಶ್ರೀ ವೀರಭದ್ರೇಶ್ವರ ಸ್ವಾಮಿ ದರ್ಶನ ಪಡೆದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಮುಸ್ಲಿಂ ಕಾನ್ಫರೆನ್ಸ್‌ನ ಎರಡು ಬಣಗಳ ಮೇಲೆ ನಿಷೇಧ

ನವದೆಹಲಿ, ಪೆ. 28 – ಮುಸ್ಲಿಂ ಕಾನ್ಫರೆನ್ಸ್ ಪಕ್ಷದ ಎರಡು ಬಣಗಳ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ.

ಅಬ್ದುಲ್ ಘನಿ ಭಟ್ ಹಾಗೂ ಗುಲಾಂ ನಬಿ ಸುಮ್ಜಿ ನೇತೃತ್ವದ ಗಂಪುಗಳು ಭಾರತ ವಿರೋಧಿ ಭಾವನೆಗೆ ಪ್ರಚೋದನೆ ನೀಡುತ್ತಿವೆ ಹಾಗೂ ಪಾಕಿಸ್ತಾನದ ಪರ ಪ್ರಚಾರ ನಡೆಸುತ್ತಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

# ಮಾದಕ ವಸ್ತುಗಳ ಮಾರಾಟ, ಕಳ್ಳಸಾಗಣೆ ತಡೆಗೆ ಕಟ್ಟುನಿಟ್ಟಿನ ಕ್ರಮ

## ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಚ್ಚರಿಕೆ



ದಾವಣಗೆರೆ, ಫೆ.28- ಮಾದಕ ವಸ್ತುಗಳ ಮಾರಾಟ ಮತ್ತು ಕಳ್ಳ ಸಾಗಾಣೆಯನ್ನು ಬೇರು ಸಮೇತ ಕಿತ್ತೊಗೆಯಲು ಪೊಲೀಸ್, ಅಬಕಾರಿ ಸಿಬ್ಬಂದಿಯವರು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ನಾರ್ಕೋಟಿಕ್ಸ್ ತಡೆ ಸಮನ್ವಯ ಸಮಿತಿ ಅಧ್ಯಕ್ಷರಾದ ಡಾ. ಎಂ.ವಿ ವೆಂಕಟೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಮಾದಕ ವಸ್ತು ಮಾರಾಟ, ಸಾಗಣೆ ತಡೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳು ಯುವ ಜನರ ಭವಿಷ್ಯದ ಜೊತೆಗೆ ಮಾನವ ಸಂಪತ್ತು ನಾಶ ಮಾಡುವ ವಸ್ತುಗಳಾಗಿವೆ. ಯಾವುದೇ ಕಾರಣಕ್ಕೂ ಇಂತಹ ಮಾದಕ ವಸ್ತುಗಳ ಮಾರಾಟ ಜಾಲ, ಕಳ್ಳ ಸಾಗಣೆ ಮಾಡುವುದನ್ನು ತಡೆಗಟ್ಟಿ ಇದಕ್ಕೆ ಪ್ರೋತ್ಸಾಹ, ಮಾರಾಟ ಮಾಡುವ ಜಾಲವನ್ನು ಬೇರು ಸಮೇತ ಕಿತ್ತೆಸೆಯಬೇಕೆಂದು ಸೂಚನೆ ನೀಡಿದರು.

ಕಳೆದ 2011 ರಿಂದ 2024 ರ ಫೆಬ್ರವರಿ 26 ರವರೆಗೆ 230 ಪ್ರಕರಣಗಳನ್ನು ದಾಖಲಿಸಲಾಗಿದೆ. ಆದರೆ 2023ರಲ್ಲಿ 90 ಪ್ರಕರಣಗಳನ್ನು ದಾಖಲಿಸಲಾಗಿದೆ. 2024 ರಲ್ಲಿ ಎರಡು ತಿಂಗಳಲ್ಲಿ 21 ಪ್ರಕರಣಗಳು ದಾಖಲಾಗಿವೆ. ಇಲ್ಲಿಯವರೆಗಿನ 230 ಪ್ರಕರಣಗಳಲ್ಲಿ 32 ತನಿಖೆ ಹಂತದಲ್ಲಿವೆ, 141 ನ್ಯಾಯಾಲಯದಲ್ಲಿ ವಿಚಾರಣೆ ಹಂತ, 35 ರಲ್ಲಿ ಶಿಕ್ಷೆಯಾಗಿದ್ದು, 20 ಬಿಡುಗಡೆಯಾಗಿವೆ. 2024ರ ಜನವರಿ ಮತ್ತು ಫೆಬ್ರವರಿ 24ರವರೆಗೆ ವರದಿಯಾದ ಪ್ರಕರಣಗಳಲ್ಲಿ ಆಜಾದ್ ನಗರ ಠಾಣೆ ವ್ಯಾಪ್ತಿಯಲ್ಲಿ 5, ಕೆಟಿಜೆ ನಗರ ಠಾಣೆ ವ್ಯಾಪ್ತಿಯಲ್ಲಿ 3, ಸಿಇಎನ್ 3, ನ್ಯಾಮತಿ 2, ಹೊನ್ನಾಳಿ 1, ಹರಿಹರ 1, ಜಗಳೂರು 1, ವಿದ್ಯಾನಗರ, ಬಡಾವಣೆ ತಲಾ 1 ಪ್ರಕರಣಗಳು ದಾಖಲಾಗಿವೆ. ಮತ್ತು ಮೂವರು ಮಾರಾಟಗಾರರ ಮೇಲೆ ಪ್ರಕರಣ ದಾಖಲಾಗಿದ್ದು, ಚನ್ನಗಿರಿ 1 ರಲ್ಲಿ ಹಸಿ ಗಾಂಜಾ, ಆಜಾದ್ ನಗರ 349 ಗ್ರಾಂ ಒಣ ಗಾಂಜಾ, ಹರಿಹರ ಗ್ರಾಮಾಂತರ 200 ಗ್ರಾಂ ಒಣಗಾಂಜಾ ಪ್ರಕರಣ ದಾಖಲಿಸಿ 3 ಜನರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಸಭೆಗೆ ಮಾಹಿತಿ ನೀಡಿದರು.

ಅಲ್ಲದೇ ಅಬಕಾರಿ ಇಲಾಖೆಯಿಂದಲೂ ಮಾದಕ ವಸ್ತುಗಳ ಮಾರಾಟ, ಸಾಗಣೆ ಬಗ್ಗೆ ನಿಗಾವಹಿಸಲಾಗಿದ್ದು, 6 ಪ್ರಕರಣಗಳಲ್ಲಿ ಮಾದಕ ವಸ್ತುಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ. ಇವು ಸಾಸ್ವೇಹಳ್ಳಿ, ದಾವಣಗೆರೆ ಬನಶಂಕರಿ ಬಡಾವಣೆ, ಬೂದಿಹಾಳ್ ರಸ್ತೆ ಮುಬಾರಕ್ ಪ್ಯಾಲೇಸ್ ಮುಂಭಾಗ, ಬಿ.ಕಲ್ಪನಹಳ್ಳಿ ವೃತ್ತದ ಹತ್ತಿರ, ಆನಗೋಡು ಪಾರ್ಕ್ ಹತ್ತಿರ ಸರ್ವೀಸ್ ರಸ್ತೆ, ದೇವರಾಜ್ ಅರಸ್ ಬಡಾವಣೆ 'ಸಿ' ಬ್ಲಾಕ್, ಚನ್ನಗಿರಿ ತಾಲ್ಲೂಕು ಕಚೇರಿ ಹತ್ತಿರ, ಬೇತೂರು ರಸ್ತೆ ದೊಡ್ಡಹಳ್ಳ ಸೇತುವೆ, ಹೊನ್ನಾಳಿ ಮಾರಿಕೊಪ್ಪ-ಬಾರ್‌ಲೈನ್ ಕೂಡು ರಸ್ತೆ, ಹೊನ್ನಾಳಿ ತುಂಗಭದ್ರಾ ಬಡಾವಣೆ, ದಾವಣಗೆರೆ ಆಂಜನೇಯ ಬಡಾವಣೆಯಲ್ಲಿ ವರದಿಯಾಗಿವೆ. ಇವು ಮಾದಕ ವಸ್ತುಗಳ ಸೇವನೆ, ಗಾಂಜಾ ಪತ್ತೆ ಪ್ರಕರಣಗಳಾಗಿವೆ ಎಂದು ಎಸ್ಪಿ ವಿವರಿಸಿದರು.

ಯುವ ಜನರಲ್ಲಿ ಮಾದಕ ವಸ್ತುಗಳ ವ್ಯಾಮೋಹ ಹೆಚ್ಚಿರುತ್ತದೆ. ಇದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಅದರಲ್ಲೂ ಇಂಜಿನಿಯರಿಂಗ್, ವೈದ್ಯಕೀಯ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಮಾದಕ ವಸ್ತುಗಳ ವಿರುದ್ಧ ಜಾಗೃತರನ್ನಾಗಿ ಮಾಡಲು ಜಾಥಾ, ವಿಚಾರ ಸಂಕಿರಣ, ಪ್ರಬಂಧ ಸ್ಪರ್ಧೆಗಳನ್ನು ಹೆಚ್ಚು ಹೆಚ್ಚು ಮಾಡುವ ಮೂಲಕ ಮಾದಕ ವಸ್ತುಗಳನ್ನು ತಡೆಗಟ್ಟಿ ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಯೋಗ, ಧ್ಯಾನ ಮಾಡಿ ಆರೋಗ್ಯ ಜೀವನ ನಡೆಸಲು ಮಹಿಳೆಯರಿಗೆ ಡಾ. ಪ್ರಭಾ ಮಲ್ಲಿಕಾರ್ಜುನ ಕರೆ



ದಾವಣಗೆರೆ, ಫೆ. 28 - ಎಸ್.ಎಸ್.ಕೇರ್ ಟ್ರಸ್ಟ್, ವಾಸವಿ ಯುವತಿಯರ ಸಂಘ, ಡಿ.ಸಿ.ಎಂ. ಟೌನ್‌ಶಿಪ್ ಇವರ ಸಂಯುಕ್ತಾಶ್ರಯದಲ್ಲಿ 'ನನ್ನ ನಡೆ ಆರೋಗ್ಯದ ಕಡೆ' ಎಂಬ ಮಹಿಳಾ ಆರೋಗ್ಯ ಶಿಬಿರವನ್ನು ನಗರದ ಎಂ.ಸಿ.ಸಿ.'ಬಿ' ಉಚಿತ ಬ್ಲಾಕ್‌ನಲ್ಲಿರುವ ಶ್ರೀ ಸದ್ಯೋಜಾತ ಮಠದಲ್ಲಿ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್. ಎಸ್.ಕೇರ್ ಟ್ರಸ್ಟ್‌ನ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಹೆಣ್ಣು ಮಕ್ಕಳು ತಮಗೋಸ್ಕರ ದಿನದ ಅರ್ಧ ಗಂಟೆಯಾದರೂ ಯೋಗ, ಧ್ಯಾನ ಅಳವಡಿಸಿಕೊಂಡು ಉತ್ತಮ ಆಹಾರ ಪದ್ಧತಿಯಿಂದ ಆರೋಗ್ಯಕರ ಜೀವನ ನಡೆಸಲು ತಿಳಿಸಿದರು.

ಮಹಿಳೆಯರಿಂದ ಆಯೋಜಿಸಲ್ಪಟ್ಟ ಈ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದೀರೆಂದು ಶ್ಲಾಘಿಸಿದ ಅವರು ಇನ್ನೂ ಹೆಚ್ಚಿನ ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಾಸವಿ ಯುವತಿಯರ ಸಂಘದ ಅಧ್ಯಕ್ಷರಾದ ಶ್ರೀಮತಿ ವಿಮಲರಾಜೇಂದ್ರ ವಹಿಸಿದ್ದರು. ನಿಕಟಪೂರ್ವ ಅಧ್ಯಕ್ಷರಾದ ಕೃಷ್ಣವೇಣಿ, ಶೇಷಾದ್ರಿ, ಡಾ.ಅನುರೂಪ್, ಡಾ. ರಾಜೀವ್ ಉಪಸ್ಥಿತರಿದ್ದರು.

ಡಾ. ಅನುರೂಪ್ ಮಾತನಾಡಿ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್ ತಡೆಯಲು ವ್ಯಾಕ್ಸಿನೇಷನ್ ಬಗ್ಗೆ ವಿಸ್ತಾರವಾಗಿ ವಿವರಿಸಿದರು.

ವಾಸವಿ ಯುವತಿಯರ ಸಂಘದಿಂದ ಡಾ. ಪ್ರಭಾ ಅವರಿಗೆ ಗೌರವಾರ್ಪಣೆ ಮಾಡಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಗಾಯತ್ರಿ, ಸ್ವಾಗತವನ್ನು ಪುಷ್ಪ, ಪ್ರಾರ್ಥನೆ ಉಷಾ ಹಾಗೂ ಶೋಭಾ ಮತ್ತು ವಂದನಾರ್ಪಣೆ ಶಾಂತಾ ನೆರವೇರಿಸಿದರು.

# ಎಡ ಪಕ್ಷಗಳ ಜೊತೆ ಬೇರೆಡೆ ಮೈತ್ರಿ, ಕೇರಳದಲ್ಲಿ ಚುನಾವಣಾ ವಿರೋಧ

ನವದೆಹಲಿ, ಫೆ. 28 - ಬೇರೆ ರಾಜ್ಯಗಳಲ್ಲಿ ಎಡಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳುತ್ತೇವೆ. ಆದರೆ, ಕೇರಳದಲ್ಲಿ ಚುನಾವಣೆಯಲ್ಲಿ ವಿರೋಧಿಸುತ್ತೇವೆ ಎಂದು ಕಾಂಗ್ರೆಸ್ ಪಕ್ಷ ತಿಳಿಸಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಯನಾಡ್‌ನಲ್ಲಿ ಸಿ.ಪಿ.ಐ.ನ ಆನ್ನಿ ರಾಜಾ ಅವರು ಸ್ಪರ್ಧಿಸಲಿದ್ದಾರೆ ಎಂದು ಪಕ್ಷ ಪ್ರಕಟಿಸಿದೆ. ಪ್ರಸಕ್ತ ಈ ಕ್ಷೇತ್ರವನ್ನು ರಾಹುಲ್ ಗಾಂಧಿ ಪ್ರತಿನಿಧಿಸುತ್ತಿದ್ದಾರೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಎಡಪಕ್ಷಗಳು ಐ.ಎನ್.ಡಿ.ಐ.ಎ. ಮೈತ್ರಿಕೂಟದ ಭಾಗವಾಗಿವೆ. ಆದರೆ, ಇದರಿಂದಾಗಿ ಕೇರಳದಲ್ಲಿ ಪರಸ್ಪರರ ವಿರುದ್ಧ ಸ್ಪರ್ಧಿಸುವುದಕ್ಕೆ ಅಡ್ಡಿಯಾಗದು ಎಂದಿದ್ದಾರೆ.

ಬೇರೆ ರಾಜ್ಯಗಳಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಮೈತ್ರಿ ಹೊಂದಿರಲಿವೆ. ಆದರೆ, ಕೇರಳದಲ್ಲಿ ಪರಸ್ಪರ ಚುನಾವಣಾ ಹೋರಾಟ ನಡೆಸುವುದನ್ನು ಮುಂದುವರೆಸಲಿವೆ ಎಂದು ರಮೇಶ್ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ವಯನಾಡ್ ಕ್ಷೇತ್ರಕ್ಕೆ ಇನ್ನೂ ಅಭ್ಯರ್ಥಿ ಘೋಷಿಸಬೇಕಿದೆ.

# ಅಕ್ರಮ ಗಣಿಗಾರಿಕೆ : ಅಖಿಲೇಶ್‌ಗೆ ಸಿಬಿಐ ಸಮನ್ಸ್

ನವದೆಹಲಿ, ಫೆ. 28 - ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರಿಗೆ ಸಿ.ಬಿ.ಐ. ಸಮನ್ಸ್ ಕಳಿಸಿದೆ. ಐದು ವರ್ಷಗಳ ಹಿಂದೆ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ದಾಖಲಿಸಲಾಗಿತ್ತು.

2012-13ರಲ್ಲಿ ಯಾದವ್ ಅವರು ಅಲ್ಪ ಅವಧಿಗೆ ಗಣಿಗಾರಿಕೆ ಖಾತೆ ಹೊಂದಿದ್ದರು. ಈ ಅವಧಿಯಲ್ಲಿ ಗಣಿಗಾರಿಕೆ ಗುತ್ತಿಗೆ ನೀಡುವಾಗ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಲಾಗಿತ್ತು. ಈ ಬಗ್ಗೆ ತನಿಖೆ ನಡೆಸಲು ಅಲಹಾಬಾದ್ ಹೈಕೋರ್ಟ್ ಆದೇಶಿಸಿತ್ತು. ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಗಣಿಗಾರಿಕೆಯ ಮೇಲೆ ನಿಷೇಧ ಹೇರಿದ್ದರೂ ಸಹ, ಅಕ್ರಮವಾಗಿ ಗಣಿಗಾರಿಕೆಗೆ ಅನುಮತಿ ನೀಡಲಾಗಿತ್ತು ಹಾಗೂ ಅನುಮತಿಗಳನ್ನು ನವೀಕರಣ ಮಾಡಲಾಗಿತ್ತು ಎಂದು ಆರೋಪಿಸಲಾಗಿತ್ತು.

# ಹಿಮಾಚಲ ಸರ್ಕಾರ ರಕ್ಷಣೆಗೆ ಕೈ ವೀಕ್ಷಕರ ದೌಡು

**ಬಿಜೆಪಿ ಶಾಸಕರ ಅಮಾನತ್ತಿನ ನಂತರ ಬಜೆಟ್‌ಗೆ ಅನುಮೋದನೆ**

ನವದೆಹಲಿ, ಫೆ. 28 - ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಹಾಗೂ ಪ್ರಭಾವಿ ಸಚಿವ ವಿಕ್ರಮಾದಿತ್ಯ ಸಿಂಗ್ ಅವರ ರಾಜೀನಾಮೆಯ ನಂತರ, ಹಿಮಾಚಲ ಪ್ರದೇಶ ಸರ್ಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ತೀವ್ರ ಪ್ರಯತ್ನ ನಡೆಸಿದೆ.

ಮಂಗಳವಾರ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಆರು ಶಾಸಕರು ಅಡ್ಡ ಮತದಾನ ಮಾಡಿದ್ದರು. ಇದರಿಂದಾಗಿ ಬಿಜೆಪಿಯ ಅಭ್ಯರ್ಥಿ ಗೆಲುವು ಸಾಧಿಸಿದ್ದರು.

ಬುಧವಾರ ಸುಖ್ವಿಂದರ್ ಸಿಂಗ್ ಸುಖು ಸರ್ಕಾರ ಬಜೆಟ್‌ಗೆ ಅನುಮೋದನೆ ಪಡೆಯಬೇಕಿತ್ತು. ಬಜೆಟ್‌ಗೆ ಧ್ವನಿ ಮತದ ಮೂಲಕ ಅನುಮೋದನೆ ನೀಡುವುದನ್ನು ಬಿಜೆಪಿ ಶಾಸಕರು ವಿರೋಧಿಸಿದ್ದರು. ಇದರಿಂದಾಗಿ ಸರ್ಕಾರ ಸಮಸ್ಯೆಗೆ ಸಿಲುಕಬಹುದು ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬಂದಿದ್ದವು.

ಬುಧವಾರ ಬೆಳಿಗ್ಗೆ ಜೈ ರಾಮ್ ಠಾಕೂರ್ ಅವರು ರಾಜ್ಯಪಾಲ ಶಿವ ಪ್ರತಾಪ್ ಶುಕ್ಲಾರನ್ನು ಭೇಟಿ ಮಾಡಿ, ಹಣಕಾಸು ಮಸೂದೆಯನ್ನು ಮತಕ್ಕೆ ಹಾಕುವ ಮೂಲಕವೇ ಅಂಗೀಕಾರ ಪಡೆಯುವಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದ್ದರು.

ಆದರೆ, ವಿಧಾನಸಭಾಧ್ಯಕ್ಷ ಕುಲ್ದೀಪ್ ಸಿಂಗ್ ಪಠಾಣಿಯ ಅವರಿಗೆ ಅಗೌರವ ತೋರಿದ ಆರೋಪದ ಮೇಲೆ ಪ್ರತಿಪಕ್ಷದ ನಾಯಕ ಜೈ ರಾಮ್ ಠಾಕೂರ್ ಸೇರಿದಂತೆ 15 ಬಿಜೆಪಿ ಶಾಸಕರನ್ನು ಅಮಾನತ್ತುಗೊಳಿಸಲಾಯಿತು. ನಂತರ ಬಜೆಟ್‌ಗೆ ಧ್ವನಿಮತದ ಮೂಲಕ ಒಪ್ಪಿಗೆ ಪಡೆಯಲಾಯಿತು. ಹಣಕಾಸು ವಿಧೇಯಕ ಮತಕ್ಕೆ ಹಾಕಿದಾಗ, ಬಿಜೆಪಿಯ ಯಾವ ಶಾಸಕನೂ ಉಪಸ್ಥಿತರಿರಲಿಲ್ಲ.


ಹದಿನಾಲ್ಕು ತಿಂಗಳ ಹಿಂದೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು, ರಾಜ್ಯದ 68 ಶಾಸಕ ಸ್ಥಾನಗಳ ಪೈಕಿ 40ರಲ್ಲಿ ಗೆಲುವು ಸಾಧಿಸಿತ್ತು. ಬಿಜೆಪಿ 25 ಸ್ಥಾನಗಳಲ್ಲಿ ಗೆದ್ದಿತ್ತು. ರಾಜ್ಯದಲ್ಲಿ ಮೂವರು ಸ್ವತಂತ್ರ ಶಾಸಕರಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಸಹ ಹಿಮಾಚಲ ಸರ್ಕಾರ ಉಳಿಸಿಕೊಳ್ಳುವ ಕಸರತ್ತಿನಲ್ಲಿ ತೊಡಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ನಾಯಕರಾದ ಭೂಪೇಶ್ ಬಾಘೇಲ್, ಭೂಪಿಂದರ್ ಸಿಂಗ್ ಹೂಡ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ವೀಕ್ಷಕರಾಗಿ ರಾಜ್ಯಕ್ಕೆ ರವಾನಿಸಿದ್ದಾರೆ. ಕೆಲ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಸೂಚನೆಯನ್ನೂ ನೀಡಿದ್ದಾರೆ.

ಅಸಮಾಧಾನಗೊಂಡಿರುವ ಶಾಸಕರೂ ಸೇರಿದಂತೆ, ಎಲ್ಲ ಶಾಸಕರನ್ನು ಭೇಟಿ ಮಾಡಿ ಸಮಗ್ರ ವರದಿ ನೀಡುವಂತೆ ಖರ್ಗೆ ಕೇಂದ್ರ ವೀಕ್ಷಕರಿಗೆ ತಿಳಿಸಿದ್ದಾರೆ. ಇದಕ್ಕೂ ಮುಂಚೆ ಹಿಮಾಚಲ ಪ್ರದೇಶದ ಲೋಕೋಪಯೋಗಿ ಸಚಿವ ವಿಕ್ರಮಾದಿತ್ಯ ಸಿಂಗ್ ಅವರು ಸಂಪುಟಕ್ಕೆ ರಾಜೀನಾಮೆ ನೀಡಿದ್ದರು. ಸಿಂಗ್ ಅವರ ತಾಯಿ ಪ್ರತಿಭಾ ಸಿಂಗ್ ಅವರು ಹಿಮಾಚಲ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ.

ವಿಕ್ರಮಾದಿತ್ಯ ಸಿಂಗ್ ಅವರು ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಪುತ್ರ. ರಾಜ್ಯದ ಸುಖು ಸರ್ಕಾರದ ಬಗ್ಗೆ ಪ್ರತಿಭಾ ಸಿಂಗ್ ಅವರು ಈ ಹಿಂದೆಯೂ ಅಸಮಾಧಾನ ವ್ಯಕ್ತಪಡಿಸಿದ್ದರು.

# ಗ್ಯಾರಂಟಿ ಸಮಿತಿ ಅಧ್ಯಕ್ಷರಾಗಿ ಹೆಚ್.ಎಂ. ರೇವಣ್ಣ



ಬೆಂಗಳೂರು, ಫೆ. 28 - ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕ ಮಾಡಿದ್ದಾರೆ.

ರೇವಣ್ಣಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನದ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ಸಮಿತಿಯ ಉಪಾಧ್ಯಕ್ಷರಾಗಿ ಮೆಹರೂಜ್ ಖಾನ್, ಪುಷ್ಪ ಅಮರನಾಥ್, ಎಸ್.ಆರ್.ಪಾಟೀಲ್ ಮತ್ತು ಸೂರಜ್ ಹೆಗ್ಡೆ ಅವರನ್ನು ನೇಮಿಸಲಾಗಿದೆ.

# ಸೂರ್ಯನಿಂದ ಜೀವ ಜಂತುಗಳಿಗೆ ಹೊಸ ಚೈತನ್ಯ



**ರಾಷ್ಟ್ರೋತ್ಥಾನ ವಿದ್ಯಾಲಯದ ರಥಸಪ್ತಮಿ ಕಾರ್ಯಕ್ರಮದಲ್ಲಿ ನವೀನ್ ಸುಬ್ರಹ್ಮಣ್ಯ**

ದಾವಣಗೆರೆ, ಫೆ. 28 - ಸೂರ್ಯ ಸೃಷ್ಟಿಯ ಉತ್ಸಾಹ ವರ್ಧಕ. ಈ ರಥಸಪ್ತಮಿ ದಿನ ಸೂರ್ಯ ತನ್ನ ಪಥವನ್ನು ಬದಲಿಸುವ ದಿನವಾಗಿದೆ. ಸೂರ್ಯನ ಪ್ರಖರತೆ ಜೀವ ಜಂತುಗಳಿಗೆ ಹೊಸ ಚೈತನ್ಯವನ್ನು ನೀಡುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಭಾಗ ಪ್ರಚಾರಕ ನವೀನ್ ಸುಬ್ರಹ್ಮಣ್ಯ ಗುರೂಜಿ ಹೇಳಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ರಥಸಪ್ತಮಿ ಕಾರ್ಯಕ್ರಮವನ್ನು ಕಳೆದ ವಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶಾಲೆಯ ಆಡಳಿತ ಸಮಿತಿಯ ಸದಸ್ಯರಾದ ವಿನಾಯಕ ರಾನಡೆ, ಪ್ರತಿನಿತ್ಯ ಯೋಗವನ್ನು ಮಾಡುವುದರಿಂದ ದೈಹಿಕ ಹಾಗೂ ಮಾನಸಿಕವಾಗಿ ಬಲಿಷ್ಠರಾಗಬಹುದು ಎಂದು ತಿಳಿಸಿದರು.

ಶಾಲೆಯ ಕಾರ್ಯದರ್ಶಿ ಜಯಣ್ಣ, ಆಡಳಿತ ಸಮಿತಿ ಸದಸ್ಯರಾದ ಶ್ರೀಮತಿ ಭಾರತಿ ಹೆಗಡೆ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಗುಣ ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

